ಮುಂಬಯಿ ರಾಜ್ಯದಲ್ಲಿ

# ಕನ್ನಡ ಸಂಶೋಧನೆ

( ೧೯೩೯—೧೯೫೧ )


ಬರೆದವರು :

ವಿದ್ಯಾರತ್ನ ಆರ್. ಎಸ್. ಪಂಚಮುಖಿ, ಎಂ. ಎ.,

ಡಾಯರೆಕ್ಟರ ಆಫ್ ಕನ್ನಡ ರಿಸರ್ಚ.



K
891.481407
P 191 K



…ಸರ್ಚ ಇನ್ಸ್ಟಿಟ್ಯೂಟ, ಧಾರವಾಡ

೧೯೫೨



K
891.481
407
P191 K

INDIAN INSTITUTE OF
ADVANCED STUDY
SIMLA

CATALOGUED

BANARSIDASS
DELHI

ಮುಂಬಯಿ ರಾಜ್ಯದಲ್ಲಿ

Kannada Research (in Mumbai State)

# ಕನ್ನಡ ಸಂಶೋಧನೆ

(೧೯೪೭—೧೯೫೧)


ಬರೆದವರು :

Vaidya Ratna Panchamukhi

**ವಿದ್ಯಾರತ್ನ ಆರ್. ಎಸ್. ಪಂಚಮುಖಿ, ಎಂ. ಎ.,**

ಡಾಯರೆಕ್ಟರ ಆಫ್ ಕನ್ನಡ ರಿಸರ್ಚ.



Dharwad, Kannada Research Institute

**ಕನ್ನಡ ರಿಸರ್ಚ ಇನ್ಸ್ಟಿಟ್ಯೂಟ, ಧಾರವಾಡ** 1957

೧೯೫೭

*Published by :*

R. S. Panchamukhi M. A.

at the

Kannada Research Institute

Dharwar.

INDIAN INSTITUTE OF ADVANCED STUDY

Acc. No. G-2182

Date 11-6-98

SIMLA

K

891.481

P191K

ಬೆಲೆ : ೨-೦-೦

Library IIAS, Shimla

K 891.481 407 P 191 K

G2182

*Printed by :*

N. V. Kurdi

Shree Saraswatee Printing Wor

Dharwar.

# ಅನುಕ್ರಮಣಿಕೆ

## ೧. ವಿಷಯಗಳು

(೧) ಮುನ್ನುಡಿ
(೨) ಮೂಲ ಸಾಮಗ್ರಿಗಳ ಸಂಗ್ರಹ ಮತ್ತು ಅಭ್ಯಾಸ
(೩) ಕರ್ನಾಟಕದ ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ಅವಶೇಷಗಳು
(೪) ಶಾಸನಗಳು
(೫) ನಾಣ್ಯಗಳು
(೬) ಕರ್ನಾಟಕದ ವಾಸ್ತುಶಿಲ್ಪ ಮತ್ತು ಕಲೆ
(೭) ವಿಗ್ರಹಗಳು
(೮) ವಸ್ತುಸಂಗ್ರಹಾಲಯ
(೯) ಸಂಸ್ಥೆಯ ವಿಶೇಷ ಉಪನ್ಯಾಸಗಳು
(೧೦) ಜಾನಪದ ಸಾಹಿತ್ಯ
(೧೧) ಫೋಟೋ ಮತ್ತು ಮೂರ್ತಿಗಳ ರೇಖಾಚಿತ್ರಗಳು
(೧೨) ವಾರ್ಷಿಕ ಸಂಶೋಧನೋಪನ್ಯಾಸಗಳು
(೧೩) ಪುಸ್ತಕ ಭಾಂಡಾರ
(೧೪) ರೀಡರ ಮತ್ತು ರಿಸರ್ಚ ಅಸಿಸ್ಟಂಟರ ಕೆಲಸ
(೧೫) ಸ್ನಾತಕೋತ್ತರ ಅಭ್ಯಾಸ ಮತ್ತು ಸಂಶೋಧನೆ
(೧೬) ಸಂಸ್ಥೆಯ ಸಂಶೋಧನ ಮಂಡಲ
(೧೭) ಸಂಸ್ಥೆಯ ಪ್ರಕಟನೆಗಳು
(೧೮) ಸಂಶೋಧನ ಭಾಷಣಗಳು
(೧೯) ಕನ್ನಡ ಸಂಶೋಧನೆಗೆ ಸಂಸ್ಥೆಯ ಕೊಡುಗೆ
(೨೦) ಕೊನೆ
(೨೧) ಅನುಬಂಧ—೧.

## ೨. ಚಿತ್ರಗಳು

(೧) ಧಾರವಾಡ, ಕನ್ನಡ ರಿಸರ್ಚ ಇನ್ಸ್ಟಿಟ್ಯೂಟ- ಮೂಲ ಶಾಸನಗಳ ಮುಖಾಂತರ ಕನ್ನಡ ಅಕ್ಷರಗಳ ಕಾಲಾನುಕ್ರಮ ಬೆಳವಣಿಗೆಯನ್ನು ತೋರಿಸುವ ವಿಭಾಗ.

(೨) ಪ್ರಾಕೃತ ಭಾಷೆ ಮತ್ತು ಬ್ರಾಹ್ಮೀಲಿಪಿಯಲ್ಲಿದ್ದ ವಡಗಾವ— ಮಾಧವಪೂರದ ಯೂಪಸ್ತಂಭ ಶಾಸನ.

(೩) ಅಜಂತೆಯ ಗುಹೆಯಲ್ಲಿಯ ವರ್ಣಚಿತ್ರಗಳು.

(೪) ಚಲಿಕ್ಯ ವಲ್ಲಭೇಶ್ವರನ ಬಾದಾಮಿ ಬಂಡೆಗಲ್ಲು ಶಾಸನ.

(೫) ಪಟ್ಟದಕಲ್ಲಿನ ನಟರಾಜನ ಮೂರ್ತಿ.

(೬) ಪಟ್ಟದಕಲ್ಲು:— ವಿರೂಪಾಕ್ಷ ದೇವಸ್ಥಾನದಲ್ಲಿ ಕಲ್ಲಿನಲ್ಲಿ ಕೆತ್ತಿದ ಅಡವಿಯಲ್ಲಿಯ ಒಂದು ಆಶ್ರಮದ ದೃಶ್ಯ.

(೭) ಹೊಯ್ಸಳ (?) ಉದಯಾದಿತ್ಯನ ಮತ್ತು ಕದಂಬ ಮನೆತನದ (?) ಬಂಗಾರದ ನಾಣ್ಯಗಳು.

(೮) ಕಾಯಿಕಣಿ:— ಮೂರು ವೀರಗಲ್ಲುಗಳು.

(೯) ಹಾಡುವಳ್ಳಿ:— ೭೧ ತೀರ್ಥಂಕರರ ಪಭಾವಳಿಯುಳ್ಳ ಆದಿತೀರ್ಥಂಕರನ ಕಂಚಿನ ವಿಗ್ರಹ.

(೧೦) ದೇಶಕುಲಕರ್ಣಿ ಅವರ ಇನಾಮು ಭೂಮಿಗಳಲ್ಲಿ ಕೈಹಾಕದಿರಲು ದೇಸಾಯಿಗೆ ಕೊಟ್ಟ ಮೋಡಿ ಲಿಪಿಯಲ್ಲಿದ್ದ ಒಂದು ಆಜ್ಞೆ.

(೧೧) ಧಾರವಾಡ, ಕನ್ನಡ ರಿಸರ್ಚ ಇನ್ಸ್ಟಿಟ್ಯೂಟ.— ಶಬ್ದಮಣಿದರ್ಪಣದ ತಾಳೇಗರಿ ಹಸ್ತಪ್ರತಿಯ ಮೇಲೆ ಕೊರೆದ ಚಿತ್ರವಿಚಿತ್ರ ಸುಂದರ ರೇಖಾ ಚಿತ್ರಗಳು.

(೧೨) ಧಾರವಾಡ, ಕನ್ನಡ ರಿಸರ್ಚ ಇನ್ಸ್ಟಿಟ್ಯೂಟ:— ದಂಪತಿಗಳ ನಕ್ಷೆಯುಳ್ಳ ಅಡಕೋತು.

(೧೩) ಸೋದೆ:— ಕಿನ್ನರಿ (ಕಟ್ಟಿಗೆಯ ಮೂರ್ತಿ.)

# ಮುನ್ನುಡಿ

ಮುಂಬಯಿ ಸರಕಾರವು ೧೯೩೯ರಲ್ಲಿ ಕರ್ನಾಟಕದ ಇತಿಹಾಸ, ಪ್ರಾಚ್ಯವಸ್ತು ಕನ್ನಡ ಭಾಷೆ, ಸಾಹಿತ್ಯ ಇವುಗಳ ಸಂಶೋಧನೆ ನಡೆಸಲು ಧಾರವಾಡದಲ್ಲಿ ಈ ಕನ್ನಡ ಸಂಶೋಧನ ಸಂಸ್ಥೆಯನ್ನು ಸ್ಥಾಪಿಸಿತು; ಮತ್ತು ಕನ್ನಡ ಸಂಶೋಧನೆಗೆ ಸಂಬಂಧಿಸಿದ ವಿಷಯಗಳ ಮೇಲೆ ಸೂಕ್ತಸಲಹೆಗಳನ್ನು ಕೊಡಲು ಒಂದು ಉಪದೇಶಕ ಮಂಡಲವನ್ನು ರಚಿಸಿತು.

ಡಾಯರೆಕ್ಟರರು ಸಂಶೋಧನಕಾರ್ಯದ ಒಂದು ರೂಪರೇಷೆಯನ್ನು ತಯಾರಿಸಿ ಉಪದೇಶಕ ಮಂಡಲದ ಮುಂದೆ ಇಟ್ಟರು. ಅದು ೧೯೩೯ ನೆಯ ನವ್ಹಂಬರ ೫ ಮತ್ತು ೬ ನೆಯ ದಿನಾಂಕಗಳಲ್ಲಿ ಮೊದಲನೆಯ ಸಲ ಕೂಡಿ ಆ ರೂಪರೇಷೆಯನ್ನು ಚರ್ಚಿಸಿ ಸೂಚನೆಗಳೊಂದಿಗೆ ಸ್ವೀಕರಿಸಿತು. ಇದನ್ನು ಸಂಸ್ಥೆಯು ಪ್ರಸಿದ್ಧಿಸಿದ ಕನ್ನಡ ಸಂಶೋಧನೆಯ ಪರಿವಿಡಿಯಲ್ಲಿ ನೋಡಬಹುದು. ಸಂಸ್ಥೆಯ ಡಾಯರೆಕ್ಟರರ ನೇತೃತ್ವದಲ್ಲಿ ಸಂಶೋಧನ ಕಾರ್ಯದಲ್ಲಿ ಶಿಕ್ಷಣ ಪಡೆಯಲು ೧೯೪೦ ರಲ್ಲಿ ಎರಡು ರಿಸರ್ಚ ಫೆಲೋಶಿಪ್ಪುಗಳನ್ನು ಸರಕಾರವು ಪ್ರಾರಂಭಿಸಿತು. ಅವುಗಳಲ್ಲಿ ಒಂದು 'ಫೆಲೋಶಿಪ್ಪು' ೧೯೪೩ರಲ್ಲಿ ರಿಸರ್ಚ ಅಸಿಸ್ಟಂಟ ಎಂದು ಜಾಗೆಯಾಯಿತು. ೧೯೪೯ರ ವರೆಗೂ ಡಾಯರೆಕ್ಟರರ ಕಾರ್ಯದಲ್ಲಿ ರಿಸರ್ಚ ಅಸಿಸ್ಟಂಟ ಮತ್ತು ತಾತ್ಪೂರ್ತಿಕ ಫೋಟೋಗ್ರಾಫರ ಆರ್ಟಿಸ್ಟ ಇವರಿಬ್ಬರೇ ಸಹಾಯ ಮಾಡುತ್ತಿದ್ದರು. ಮುಂದೆ ಮೂರು 'ರೀಡರ'ರ ಜಾಗೆಗಳಾದವು : (೧) ಕನ್ನಡ ಭಾಷೆ ಮತ್ತು ಸಾಹಿತ್ಯಗಳಿಗೆ (೨) ದ್ರಾವಿಡ ಭಾಷಾಶಾಸ್ತ್ರಕ್ಕೆ ಮತ್ತು (೩) ಸಮಾಜಶಾಸ್ತ್ರಕ್ಕೆ. ಈ ವಿಷಯಗಳಲ್ಲಿ ಸಂಶೋಧನೆ ನಡೆಸಲು ಮೂವರು ರೀಡರರನ್ನು ನಿಯಮಿಸಿಕೊಂಡು ಸಂಶೋಧನ ಸಂಸ್ಥೆಯು ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು. ಅವರು ತಮ್ಮ ವಿಷಯಗಳಲ್ಲಿ ರಿಸರ್ಚಸ್ಟುಡಂಟರಿಗೆ ಕೆಲವೊಂದು ವಿಷಯವನ್ನು ನಿರ್ದೇಶಿಸಿ ಮಾರ್ಗದರ್ಶನ ಮಾಡುತ್ತಾರೆ. ಇದೇ ರೀತಿಯಾಗಿ ಇತಿಹಾಸ ಮತ್ತು ಪುರಾಣ ಸಂಶೋಧನೆಯನ್ನು ಅಭ್ಯಸಿಸಲು ಒಬ್ಬ 'ರಿಸರ್ಚ ಸ್ಟುಡಂಟ'ನನ್ನೂ ನಿಯಮಿಸಿತು. ಅದೇ ವರುಷವೇ ಸಂಸ್ಥೆಗೆ ಪ್ರತ್ಯೇಕ ಒಬ್ಬ 'ಲಾಯಬ್ರೇರಿಯನ್'ರನ್ನು ನಿಯಮಿಸಿಕೊಳ್ಳಲಾಯಿತು.

ಸಂಸ್ಥೆಯು ಮಾಡಿದ ಕಾರ್ಯವನ್ನು ಸ್ಥೂಲವಾಗಿ ಈ ಪುಟಗಳಲ್ಲಿ ವಿವರಿಸಿದೆ. ವಿದ್ವಾಂಸರಿಗೆ ಈ ಸಿಂಹಾವಲೋಕನದಿಂದ ಹೆಚ್ಚಿನ ಜ್ಞಾನ ಸಂಪಾದಿಸಲು ಕುತೂಹಲವೂ ಮತ್ತು ಸಾಮಾನ್ಯರಿಗೆ ತಮ್ಮ ಪೂರ್ವಜರ ಘನತೆಯ ಕಲ್ಪನೆಯೂ ಬರುವುದೆಂದು ಆಶಿಸಿದೆ. ಕರ್ನಾಟಕದ ಸಾಹಿತ್ಯ, ಇತಿಹಾಸ, ಸಂಸ್ಕೃತಿ ಇವುಗಳ ಬಗೆಗೆ ಸಂಸ್ಥೆಯು ಹದಿಮೂರು ವರುಷಗಳ ಕಾಲಾವಧಿಯಲ್ಲಿ ಸಂಶೋಧನೆಯ ಕಾರ್ಯದಲ್ಲಿ ಏನು ಸಾಧಿಸಿದೆ ಎಂಬುದನ್ನು ದಿಗ್ದರ್ಶನ ಮಾಡುವುದೇ ಈ ಪುಸ್ತಿಕೆಯ ಮುಖ್ಯ ಉದ್ದೇಶ.

ಸಂಸ್ಥೆಯು ಪ್ರಕಟಿಸಿದ ಗ್ರಂಥಗಳನ್ನು ಈ ವರದಿಯಲ್ಲಿ ನೋಡಬಹುದು.

ಕನ್ನಡ ರಿಸರ್ಚ ಇನ್ಸ್ಟಿಟ್ಯೂಟ,
ಧಾರವಾಡ.
೨೦—೩—೧೯೫೩

ಆರ್. ಎಸ್. ಪಂಚಮುಖಿ,
ಡಾಯರೆಕ್ಟರ ಆಫ್ ಕನ್ನಡ ರಿಸರ್ಚ.



ಧಾರವಾಡ, ಕನ್ನಡ ರಿಸರ್ಚ ಇನ್ಸ್ಟಿಟ್ಯೂಟ — ಮೂಲ ಶಾಸನಗಳ ಮುಖಾಂತರ ಕನ್ನಡ ಅಕ್ಷರಗಳ ಕಾಲಾನುಕ್ರಮ ಬೆಳವಣಿಗೆಯನ್ನು ತೋರಿಸುವ ವಿಭಾಗ. (ಪುಟ ೧)

ಮುಂಬಯಿ ರಾಜ್ಯದಲ್ಲಿ

# ಕನ್ನಡ ಸಂಶೋಧನೆ

( ೧೯೩೯—೧೯೫೧ )

## ಮೂಲ ಸಾಮಗ್ರಿಗಳ ಸಂಗ್ರಹ ಮತ್ತು ಅಭ್ಯಾಸ

ಸಂಸ್ಕೃತಿಯ ಸಂಶೋಧನಕ್ಕೆ ಮೂಲ ಸಾಮಗ್ರಿಗಳ ಸಂಗ್ರಹವು ಅವಶ್ಯವಾದದ್ದು. ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯು ೧೯೩೯ನೆಯ ಇಸ್ವಿಯಲ್ಲಿ ಸ್ಥಾಪಿಸಲ್ಪಟ್ಟಾಗ ಮುಂಬಯಿ ಕರ್ನಾಟಕದಲ್ಲಿ ಶಾಸ್ತ್ರೀಯ ರೀತಿಯಿಂದ ಕನ್ನಡ ವಾಙ್ಮಯ ಮತ್ತು ಇತಿಹಾಸಗಳಲ್ಲಿ ಸಂಶೋಧನೆ ನಡೆಸುವ ಸಂಸ್ಥೆಗಳು ಇರಲಿಲ್ಲವೆಂದು ಹೇಳಬಹುದು. ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಕರ್ನಾಟಕ ಇತಿಹಾಸ ಸಂಶೋಧನ ಮಂಡಳ ಇವು ಅಸ್ತಿತ್ವದಲ್ಲಿದ್ದರೂ ಅವುಗಳ ಕಾರ್ಯಕ್ಷೇತ್ರ ಅಷ್ಟೊಂದು ವಿಸ್ತಾರವಾಗಿರಲಿಲ್ಲ ಮತ್ತು ಕೆಲಮಟ್ಟಿಗೆ ಬೇರೆಯಾಗಿತ್ತು. ಆದುದರಿಂದ ಕನ್ನಡ ಸಂಶೋಧನ ಸಂಸ್ಥೆಯು ಪ್ರಾರಂಭವಾದ ಕೂಡಲೆ ಕನ್ನಡ ಸಂಸ್ಕೃತಿಗೆ ಸಂಬಂಧಪಟ್ಟ ಸಾಮಗ್ರಿಗಳನ್ನು ಕಲೆಹಾಕುವ ಕಾರ್ಯವನ್ನು ಕೈಕೊಂಡಿತು. ಈ ಕಾರ್ಯಕ್ರಮದಲ್ಲಿ ಅನೇಕ ಉಪಯುಕ್ತವಾದ ಹಾಗೂ ಮಹತ್ವದ ವಸ್ತುಗಳು ಸಂಗ್ರಹಿಸಲ್ಪಟ್ಟವು. ಅವುಗಳನ್ನು ಕೆಳಗಿನಂತೆ ವಿಂಗಡಿಸಲಾಗಿದೆ :—

(೧) ಪ್ರಾಚ್ಯವಸ್ತು ಮತ್ತು ನಿವೇಶನಗಳ ಹೊಸ ಶೋಧದಿಂದ ಸಂಗ್ರಹಿಸಲ್ಪಟ್ಟ ಅವಶೇಷಗಳು. ಇದರಲ್ಲಿ ಕನ್ನಡ ಸಂಸ್ಕೃತಿಯ ಪ್ರಾಗೈತಿಹಾಸಿಕ ಪ್ರಾಚೀನತೆಯನ್ನು ತೋರಿಸುವ ಮಹತ್ವದ ಕುರುಹುಗಳೂ ಸೇರುತ್ತವೆ.

(೨) ಶಿಲಾ ಹಾಗೂ ತಾಮ್ರಶಾಸನಗಳು. ಇವುಗಳನ್ನು ಧಾರವಾಡ, ಬೆಳಗಾಂವ, ಕಾರವಾರ, ವಿಜಾಪೂರ ಜಿಲ್ಹೆಗಳಲ್ಲಿ ಸಂಚಾರಮಾಡಿ ಶೇಖರಿಸಲಾಗಿದೆ.

(೩) ಕರ್ನಾಟಕದ ನಾಣ್ಯ ಸಂಪತ್ತು ವಿಪುಲವಾಗಿದೆ. ಆದರೆ ಅದರ ಬೆಲೆ ತಿಳಿಯದೆ ಈಗಾಗಲೆ ಕೆಲವು ನಾಣ್ಯಗಳು ಹಾಳಾಗಿವೆ. ಅವುಗಳ ಇತಿಹಾಸ, ಬೆಲೆ ಇವುಗಳನ್ನು ನಿವೇದಿಸಲು ನಾಣ್ಯಗಳನ್ನು ಸಂಗ್ರಹಿಸಲಾಗಿದೆ.

ಮುಂಬಯಿ ರಾಜ್ಯದಲ್ಲಿ

# ಕನ್ನಡ ಸಂಶೋಧನೆ

( ೧೯೩೯—೧೯೫೧ )

## ಮೂಲ ಸಾಮಗ್ರಿಗಳ ಸಂಗ್ರಹ ಮತ್ತು ಅಭ್ಯಾಸ

ಸಂಸ್ಕೃತಿಯ ಸಂಶೋಧನಕ್ಕೆ ಮೂಲ ಸಾಮಗ್ರಿಗಳ ಸಂಗ್ರಹವು ಅವಶ್ಯವಾದದ್ದು. ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯು ೧೯೩೯ ನೆಯ ಇಸ್ವಿಯಲ್ಲಿ ಸ್ಥಾಪಿಸಲ್ಪಟ್ಟಾಗ ಮುಂಬಯಿ ಕರ್ನಾಟಕದಲ್ಲಿ ಶಾಸ್ತ್ರೀಯ ರೀತಿಯಿಂದ ಕನ್ನಡ ವಾಙ್ಮಯ ಮತ್ತು ಇತಿಹಾಸಗಳಲ್ಲಿ ಸಂಶೋಧನೆ ನಡೆಸುವ ಸಂಸ್ಥೆಗಳು ಇರಲಿಲ್ಲವೆಂದು ಹೇಳಬಹುದು. ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಕರ್ನಾಟಕ ಇತಿಹಾಸ ಸಂಶೋಧನ ಮಂಡಳ ಇವು ಅಸ್ತಿತ್ವದಲ್ಲಿದ್ದರೂ ಅವುಗಳ ಕಾರ್ಯಕ್ಷೇತ್ರ ಅಷ್ಟೊಂದು ವಿಸ್ತಾರವಾಗಿರಲಿಲ್ಲ ಮತ್ತು ಕೆಲಮಟ್ಟಿಗೆ ಬೇರೆಯಾಗಿತ್ತು. ಆದುದರಿಂದ ಕನ್ನಡ ಸಂಶೋಧನ ಸಂಸ್ಥೆಯು ಪ್ರಾರಂಭವಾದ ಕೂಡಲೆ ಕನ್ನಡ ಸಂಸ್ಕೃತಿಗೆ ಸಂಬಂಧಪಟ್ಟ ಸಾಮಗ್ರಿಗಳನ್ನು ಕಲೆಹಾಕುವ ಕಾರ್ಯವನ್ನು ಕೈಕೊಂಡಿತು. ಈ ಕಾರ್ಯಕ್ರಮದಲ್ಲಿ ಅನೇಕ ಉಪಯುಕ್ತವಾದ ಹಾಗೂ ಮಹತ್ವದ ವಸ್ತುಗಳು ಸಂಗ್ರಹಿಸಲ್ಪಟ್ಟವು. ಅವುಗಳನ್ನು ಕೆಳಗಿನಂತೆ ವಿಂಗಡಿಸಲಾಗಿದೆ :—

(೧) ಪ್ರಾಚ್ಯವಸ್ತು ಮತ್ತು ನಿವೇಶನಗಳ ಹೊಸ ಶೋಧದಿಂದ ಸಂಗ್ರಹಿಸಲ್ಪಟ್ಟ ಅವಶೇಷಗಳು. ಇದರಲ್ಲಿ ಕನ್ನಡ ಸಂಸ್ಕೃತಿಯ ಪ್ರಾಗೈತಿಹಾಸಿಕ ಪ್ರಾಚೀನತೆಯನ್ನು ತೋರಿಸುವ ಮಹತ್ವದ ಕುರುಹುಗಳೂ ಸೇರುತ್ತವೆ.

(೨) ಶಿಲಾ ಹಾಗೂ ತಾಮ್ರಶಾಸನಗಳು. ಇವುಗಳನ್ನು ಧಾರವಾಡ, ಬೆಳಗಾಂವ, ಕಾರವಾರ, ವಿಜಾಪೂರ ಜಿಲ್ಹೆಗಳಲ್ಲಿ ಸಂಚಾರಮಾಡಿ ಶೇಖರಿಸಲಾಗಿದೆ.

(೩) ಕರ್ನಾಟಕದ ನಾಣ್ಯ ಸಂಪತ್ತು ವಿಪುಲವಾಗಿದೆ. ಆದರೆ ಅದರ ಬೆಲೆ ತಿಳಿಯದೆ ಈಗಾಗಲೆ ಕೆಲವು ನಾಣ್ಯಗಳು ಹಾಳಾಗಿವೆ. ಅವುಗಳ ಇತಿಹಾಸ, ಬೆಲೆ ಇವುಗಳನ್ನು ನಿವೇದಿಸಲು ನಾಣ್ಯಗಳನ್ನು ಸಂಗ್ರಹಿಸಲಾಗಿದೆ.

(೪) ಕಲ್ಲು ಮತ್ತು ಧಾತುಗಳಲ್ಲಿ ನಿರ್ಮಿತವಾದ ಕೆಲವು ಉತ್ತಮ ವಿಗ್ರಹಗಳನ್ನು ಕರ್ನಾಟಕದ ಮೂರ್ತಿಶಿಲ್ಪವನ್ನು ಅಭ್ಯಸಿಸಲು ಮತ್ತು ಪ್ರದರ್ಶಿಸಲು ಸಂಗ್ರಹಿಸಲಾಯಿತು. ವರ್ಣಕಲೆಯ ಕೆಲವು ಅಪರೂಪವಾದ ಚಿತ್ರಗಳೂ ಇವೆ. ಇದಲ್ಲದೆ ಕರ್ನಾಟಕದ ವಾಸ್ತುಶಿಲ್ಪದ ಕೆಲವು ಮಾದರಿಗಳನ್ನೂ ಪ್ರದರ್ಶನೆಗೆ ಇಡಲಾಗಿದೆ.

(೫) ಕನ್ನಡ ವಾಙ್ಮಯದ ಐತಿಹಾಸಿಕ ಯುಗದ ಅವಶೇಷಗಳು—ಓಲೆಯ ಇಲ್ಲವೆ ಕಾಗದದ ಮೇಲೆ ಬರೆದ ಹಳೆಯ ಗ್ರಂಥಗಳು. ಇವುಗಳಲ್ಲಿ ಕನ್ನಡ ವಾಙ್ಮಯದ ವಿಸ್ತಾರವನ್ನೂ ವಿಶಾಲವ್ಯಾಪ್ತಿಯನ್ನೂ, ತಿಳಿಸುವ ಕೆಲವು ಮಹತ್ವದ ಹೊತ್ತಿಗೆಗಳು ಇವೆ.

(೬) ಶಾಸನಯುಗವಾದ ಮೇಲೆ ಅಂದರೆ ಕ್ರಿ. ಶ. ೧೬ ನೆಯ ಶತಮಾನ ಹಾಗೂ ಆನಂತರದ ಕಾಲಕ್ಕೆ ಸಂಬಂಧಿಸಿದ ಐತಿಹಾಸಿಕ ಕಾಗದಪತ್ರಗಳು. ಇವು ನಾಗರೀ, ಮೋಡಿ, ಪಾರ್ಸೀ ಮತ್ತು ಕನ್ನಡ ಲಿಪಿಗಳಲ್ಲಿ ಬರೆಯಲ್ಪಟ್ಟಿವೆ. ಇವುಗಳಲ್ಲಿ ಕರ್ನಾಟಕದ ಕೆಲವು ಪ್ರತಿಷ್ಠೆಪಡೆದ ಮನೆತನಗಳ ಇತಿಹಾಸವು ಅಡಕವಾಗಿರುವದಲ್ಲದೆ ಆಗಿನ ಕಾಲದ ಸಾಮಾಜಿಕ ಜೀವನವನ್ನೂ ತಿಳಿದುಕೊಳ್ಳಲು ಸಹ ಸಹಾಯಕಾರಿಯಾಗಿವೆ.

(೭) ಕೊನೆಯದಾಗಿ ಜನಪದ ಸಾಹಿತ್ಯ ಸಂಗ್ರಹವನ್ನು ಉಲ್ಲೇಖಿಸಬಹುದು. ತಲೆಮಾರುಗಳಿಂದ ನಡೆದುಬಂದ ಈ ಸಾಹಿತ್ಯವು ಸುಗಮವಾಗಿದ್ದು ನಮ್ಮ ಸಂಸ್ಕೃತಿಯ ಪ್ರತಿಬಿಂಬದಂತಿದೆ.

ಇದುವರೆಗೆ ಹೇಳಿದ ವಿವಿಧ ಸಾಮಗ್ರಿಗಳ ಸಹಾಯದಿಂದ ಕರ್ನಾಟಕದ ಚರಿತ್ರೆ ಮತ್ತು ಸಾಹಿತ್ಯವು ಎಷ್ಟರಮಟ್ಟಿಗೆ ಮುಂದುವರೆಯಿತೆಂದು ಸ್ಥೂಲವಾಗಿ ವಿವರಿಸಲಾಗುವದು.

## (೧) ಕರ್ನಾಟಕದ ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ ಅವಶೇಷಗಳು

ಈ ಸಂಸ್ಥೆಯು ಎಷ್ಟೋ ಉಪಯುಕ್ತವಾದ ಹೊಸ ವಿಷಯಗಳನ್ನು ಬೆಳಕಿಗೆ ತಂದಿದೆ. ಪ್ರಾಗೈತಿಹಾಸಿಕ ಹಾಗೂ ಐತಿಹಾಸಿಕ ಕಾಲದ ಅವಶೇಷಗಳ ಸ್ಥಾನಗಳನ್ನು ಗುರುತಿಸಿ ಅಲ್ಲಿ ದೊರೆತ ವಸ್ತುಗಳನ್ನು ಶಾಸ್ತ್ರೀಯವಾಗಿ ಪರಿಶೀಲಿಸಿದೆ. ಪ್ರಾಚೀನ ಶಿಲಾಯುಗ, ನೂತನ ಶಿಲಾಯುಗ, ದೊಡ್ಡ ಕಲ್ಲುಗಳ ಯುಗ ಮತ್ತು ಕಬ್ಬಿಣಯುಗ ಮುಂತಾದ ಕಾಲಗಳ ಅವಶೇಷಗಳನ್ನು ಕರ್ನಾಟಕದಲ್ಲಿ ಸುದೈವದಿಂದ ಈ ಸಂಸ್ಥೆಯು ಕಂಡುಹಿಡಿದಿದೆ. ಇದರ ಬಗ್ಗೆ ಸವಿಸ್ತಾರವಾಗಿ ಸಂಸ್ಥೆಯು ಪ್ರಕಟಿಸಿದ 'Progress of Kannada Research in Bombay Province. 1941-46(P.P.42f.f.)' ಎಂಬ ಗ್ರಂಥದಲ್ಲಿ ನೋಡಬಹುದು. ಈ

# ವಡಗಾವ-ಮಾಧವಪೂರ
# ಬ್ರಾಹ್ಮೀ ಶಿಲಾಸ್ತಂಭ ಶಾಸನ

## ಶಾಸನದ ಪಾಠ[೧]

(೧) ಭಿಖು-ಸಂಘಯ

(೨) . . . . .

(೩) ಮಾಲಾಭಗವತೋ

(೪) ಕಾಠಞಸ ಸಿವಯಸಸ

(೫) ಞಾಟಪತಿ ಗಾ[ಹ]ಯಃಸಿ

(೬) ತಿ-ವಾಜಪೇಯ-ಯಾಯಿಃಸ

(೭) ಕತು-ಯಾಯಿಸ

(೮) . ಅನೇಕ-ಯಞ

(೯) ಧನ-ಸಂಘಸ

(೧೦) . . ಯದುಗಾವು

(೧೧) ಸ ಅನೇಕ ವೇದಿಸ

(೧೨) ಸವ-ಕತುಕಸ

(೧೩) ಬಲಹಯ-ಸಖ

(೧೪) ಕಸಪಸ-ಗೋತಸ

(೧೫) ಧಸಸ

ಆರ್. ಎಸ್. ಪಂಚಮುಖಿ

---

೧ ತಾತ್ಕಾಲಿಕ ಪಾಠ. ಇದರ ಸವಿಮರ್ಶ ಅಭ್ಯಾಸವು ಬೇಗ ಪ್ರಕಟಿಸಲ್ಪಡುವದು.



ಪ್ರಾಕೃತ ಭಾಷೆ ಮತ್ತು ಬ್ರಾಹ್ಮೀ ಲಿಪಿಯಲ್ಲಿದ್ದ ವಡಗಾಂವ-ಮಾಧವಪುರದ ಯೂಪಸ್ತಂಭ.
(ಸು. ಕ್ರಿ. ಪೂ. ೧ನೆಯ ಶತಮಾನದಿಂದ ಕ್ರಿ. ಶ. ೧ನೆಯ ಶತಮಾನ.)
ಈಗ ಇದು ಕನ್ನಡ ರಿಸರ್ಚ ಇನ್‌ಸ್ಟಿಟ್ಯೂಟಿನಲ್ಲಿದೆ. (ಪುಟ ೫)

[ ಪುಟ ತಿರುವಿರಿ

ಪುಸ್ತಕವು ಪ್ರಕಟವಾದ ತರುವಾಯ ಮತ್ತೆ ಹತ್ತು ನಿವೇಶನಗಳು ಸಿಕ್ಕಿವೆ. ಅಲ್ಲಿ ದೊರೆತ ಮಡಿಕೆಯ ಚೂರು ಮುಂತಾದ ಅವಶೇಷಗಳ ಮೇಲಿಂದ ಅವು ಕ್ರಿ. ಶ. ಪೂ. ೧೦೦ರಿಂದ ಕ್ರಿ. ಶ. ೩ನೆಯ ಶತಮಾನದ ವರೆಗೆ ಆಳಿದ ಆಂಧ್ರರ ಕಾಲದವೆಂದು ಗೊತ್ತಾಗುವದು. ಇಲ್ಲಿಯ ವರೆಗೆ ಈ ಸಂಸ್ಥೆಯು ೪೦ ಪುರಾಣ ಸ್ಥಾನಗಳನ್ನು ಅವಲೋಕಿಸಿ ಪರೀಕ್ಷಿಸಿದೆ. (ಅನುಬಂಧ–೧ ನೋಡಿರಿ). ಈ ಶೋಧನೆಗಳಮೂಲಕ ಭಾರತದ ಪ್ರಾಚ್ಯಸಂಶೋಧನ ನಕ್ಷೆಯಲ್ಲಿ ಕರ್ನಾಟಕಕ್ಕೆ ಒಂದು ವಿಶಿಷ್ಟ ಸ್ಥಾನ ದೊರೆತಿದೆ.

ಹೊಸದಾಗಿ ಕಂಡುಹಿಡಿದ ಪ್ರಾಗ್ಯೈತಿಹಾಸಿಕ ಮತ್ತು ಐತಿಹಾಸಿಕ ಅವಶೇಷಗಳನ್ನು ಸಂಸ್ಥೆಯ ವಸ್ತುಸಂಗ್ರಹಾಲಯದಲ್ಲಿ ಪ್ರಾಗೈತಿಹಾಸಿಕ ವಿಭಾಗದಲ್ಲಿ ಪ್ರದರ್ಶಿಸಲಾಗಿದೆ.

ಭಾರತದಲ್ಲಿ ಪುರಾಣವಸ್ತುಶಾಖೆಯ ಹಿಂದಿನ ಡಾಯರೆಕ್ಟರ ಜನರಲ್ಲರಾದ ರಾವಬಹಾದ್ದೂರ ಕೆ. ಎನ್. ದೀಕ್ಷಿತರು ೧೯೪೩ರಲ್ಲಿ ಸಂಸ್ಥೆಗೆ ಭೆಟ್ಟಿ ಇತ್ತಾಗ್ಗೆ ಈ ಉದ್ಗಾರವನ್ನು ತೆಗೆದಿದ್ದಾರೆ:— "ಕನ್ನಡ ಸಂಶೋಧನೆಯ ಡಾಯರೆಕ್ಟರರಾದ ಶ್ರೀ. ಆರ್. ಎಸ್. ಪಂಚಮುಖಿಯವರ ನೇತೃತ್ವದಲ್ಲಿ ಕಳೆದ ೧೮ ತಿಂಗಳಲ್ಲಿ ಹೆಚ್ಚಿನ ಮುನ್ನಡೆಯಾದದ್ದನ್ನು ನೋಡಿ ಸಂತೋಷವಾಗುತ್ತದೆ. ಅವರ ಪ್ರಯತ್ನದಿಂದ ಬೀಳಗಿ ಪೇಠಾದಲ್ಲಿ ಅನೇಕ ಪುರಾಣ ಸ್ಥಳಗಳು ಬೆಳಕಿಗೆ ಬಂದಿವೆ. ಇವುಗಳ ಅಸ್ತಿತ್ವವನ್ನು ಈ ಮೊದಲು ಯಾರೂ ಊಹಿಸಿರಲಿಲ್ಲ. ನೆರೆಹೊರೆ ಪ್ರಾಂತಗಳಾದ ಮೈಸೂರು, ಹೈದರಾಬಾದ ಮತ್ತು ಮದ್ರಾಸ ಪ್ರಾಂತಗಳಲ್ಲಿ ದೊರೆತ ಸಾಂಸ್ಕೃತಿಕ ಅವಶೇಷಗಳೊಡನೆ ತುಲನೆಮಾಡಲು ಮುಂಬೈ ಕರ್ನಾಟಕದಲ್ಲಿ ಶಾಸ್ತ್ರೀಯ ರೀತಿಯಲ್ಲಿ ಉತ್ಖನನಗಳನ್ನು ಪ್ರಾರಂಭಮಾಡುವ ಕಾಲವು ಈಗ ಬಂದಿದೆ." ಅದೇ ಮಹನೀಯರು ೧೯೪೫ರಲ್ಲಿ ಮತ್ತೆ ಸಂಸ್ಥೆಗೆ ಭೆಟ್ಟಿ ಇತ್ತಾಗ "ಕಳೆದ ಐದು ವರುಷಗಳಲ್ಲಿ ಅವರು ಮಾಡಿದ ವಿಸ್ತಾರವಾದ ಮತ್ತು ಫಲದಾಯಕ ಸಂಶೋಧನೆಯಿಂದ ಡಾಯರೆಕ್ಟರರು ಅಗೆತವನ್ನು ಕೈಕೊಳ್ಳುವ ಕಾಲ ಬಂದಿದೆ" ಎಂದು ಬರೆದಿದ್ದಾರೆ.

೧೯೪೭ರಲ್ಲಿ ಡಾಯರೆಕ್ಟರರು ಕೊಲ್ಹಾಪುರದಲ್ಲಿಯ ಬ್ರಹ್ಮಪುರಿ ಅಗೆತದಲ್ಲಿ ಭಾಗವಹಿಸಿದ್ದರು. ಈ ಸ್ಥಾನದ ಮಹತ್ವವನ್ನು ಅವರು ೧೯೪೫ರಲ್ಲಿಯೆ ಕಂಡುಹಿಡಿದು ಕೊಲ್ಹಾಪುರ ಸಂಸ್ಥಾನದ ಪ್ರಧಾನಮಂತ್ರಿಗಳ ಮತ್ತು ಭಾರತದಲ್ಲಿಯ ಪುರಾಣ ಸಂಶೋಧನ ಖಾತೆಯ ಡಾಯರೆಕ್ಟರ ಜನರಲ್ಲರ ಗಮನಕ್ಕೆ ತಂದು ಕೊಟ್ಟಿದ್ದರು. ೧೯೪೯ರಲ್ಲಿ ಡಾಯರೆಕ್ಟರರು ಲಂಡನ್ ಯುನಿವ್ಹರ್ಸಿಟಿಯ ಜಿಯೊ–ಕ್ರೊನೊಲಜಿಯ ಪ್ರೊಫೆಸರರಾದ ಡಾ. ಎಫ್. ಈ. ಝುಯಾನರ, ಡಿ.ಎಸ್ಸಿ. ಪಿಎಚ್.ಡಿ. ಅವರನ್ನು ಕರೆದುಕೊಂಡು ಕರ್ನಾಟಕದಲ್ಲಿಯ ಖ್ಯಾಡ, ಮೆಣಸಗಿ, ಬೆಣ್ಣೆಹಳ್ಳದ ಕೊಳ್ಳ ಮುಂತಾದ ಕಡೆಗೆ ಹೋಗಿ ಪೂರ್ವ ಶಿಲಾಯುಗದ ಅವಶೇಷಗಳ ಬಗೆಗೆ ಅಭ್ಯಸಿಸಿ ಬಂದರು.

**ಪ್ರಾಗೈತಿಹಾಸಿಕ ಸನ್ನಿವೇಶಗಳ ಅಭ್ಯಾಸ:—** ಈಗ ೫೦–೬೦ ವರುಷಗ ಹಿಂದೆ ಬ್ರೂಸ ಫೂಟ ಎಂಬ ಆಂಗ್ಲ ಭೂಗರ್ಭ ತತ್ತ್ವಜ್ಞನು ನೋಡಿದನಂತ ಕರ್ನಾಟಕದಲ್ಲಿ ಈ ವಿಷಯವನ್ನು ಯಾರೂ ಮುಂದುವರಿಸಿರಲಿಲ್ಲ. ಇದನ್ನು ಮೊದಲು ಕೈಕೊಂಡ ಶ್ರೇಯಸ್ಸು ಈ ಸಂಸ್ಥೆಗಿದೆ.

## ಶಾಸನಗಳು

ಮುಂಬೈ ರಾಜ್ಯದ ಎಲ್ಲ ಕನ್ನಡ ಜಿಲ್ಹೆಗಳಲ್ಲಿಯ ಶಾಸನ, ಕೈಬರೆಹ ಗ್ರಂಥ ಮತ್ತು ಇತರ ಸಾಂಸ್ಕೃತಿಕ ಅವಶೇಷಗಳನ್ನು ಕಲೆಹಾಕುವ ಕೆಲಸವು ಪ್ರತಿವರುಷ ಸಾಗುತ್ತಲೇ ಇದೆ.

ಇಲ್ಲಿಯ ವರೆಗೆ ಸಂಸ್ಥೆಯು ಸುಮಾರು ೯೦೦ ಶಿಲಾಲಿಪಿಗಳ ನಕಲು ತೆಗೆದ ಅವುಗಳ ಅಭ್ಯಾಸಮಾಡಿದೆ. ಸಂಚಾರದಲ್ಲಿ ದೊರಕಿಸಿದ ೪೦ ತಾಮ್ರ ಶಾಸನ ಗಳನ್ನು ಪರಿಶೀಲಿಸಿದೆ. ಇವೆಲ್ಲವುಗಳು ಕ್ರಿ. ಪೂ. ೧ನೆಯ ಶತಮಾನದಿಂದ ಕ್ರಿ. ಶ ೧೭ನೆಯ ಶತಮಾನ ಇವುಗಳ ನಡುವಿನ ಕಾಲಾವಧಿಗೆ ಸೇರುತ್ತವೆ. ಅವು ಕರ್ನಾಟಕದಲ್ಲಿ ರಾಜ್ಯಭಾರ ನಡೆಸಿದ (೧) ಬನವಾಸಿಯ ಕದಂಬರು (೨ ಬದಾಮಿಯ ಚಾಲುಕ್ಯರು (೩) ಮಳಖೇಡದ ರಾಷ್ಟ್ರಕೂಟರು (೪) ಕಲ್ಯಾಣಿಯ ಚಾಲುಕ್ಯರು ಮತ್ತು ಕಲಚೂರ್ಯರು (೫) ದೇವಗಿರಿಯ ಯಾದವರು (೬ ದೋರಸಮುದ್ರದ ಹೊಯ್ಸಳರು ಮತ್ತು (೭) ವಿಜಯನಗರದ ಮನೆತನಗಳ ಮುಂತಾದ ಸುಪ್ರಸಿದ್ಧ ರಾಜಮನೆತನಕ್ಕೆ ಸಂಬಂಧಪಟ್ಟಿರುವವು. ಇವುಗ ಹೊರತು ಆ ರಾಜಮನೆತನಗಳ ಕಾಲದಲ್ಲಿದ್ದ ಅನೇಕ ಮಾಂಡಲಿಕ ರಾಜಮನೆತ ಗಳ ಇತಿಹಾಸವು ಅವುಗಳಲ್ಲಿ ಅಡಕವಾಗಿವೆ. ಈ ಅರಸುಮನೆತನಗಳಿಗೆ ಸಂಬ ಧಿಸಿದ ಹೊಸ ಸಂಗತಿಗಳನ್ನು ಈ ಶಾಸನಗಳು ತಿಳಿಸುವವಲ್ಲದೆ ಈ ವರೆಗೂ ಗೊತ್ತಾಗದೆ ಉಳಿದ ಹೊಸ ರಾಜಮನೆತನಗಳನ್ನೂ ಮೊದಲನೆಯ ಸಲ ಬೆಳಕಿ ತಂದಿವೆ.

(೧) ೬–೭ನೆಯ ಶತಮಾನದಲ್ಲಿ ಆಳಿದ ಗೋವೆಯ ಪ್ರಾಂತದ ಭೋ ಅರಸರು (೨) ೧೧–೧೨ನೆಯ ಶತಮಾನದಲ್ಲಿದ್ದ ಚಂದಾವರದ ಕದಂಬರ (೩) ಅದೇ ಕಾಲದಲ್ಲಿ ಅಕ್ಕಲಕೋಟೆ, ಇಂಡಿ, ಸಿಂದಗಿ, ಜತ್ ಮತ್ತು ಅಥಣಿ ಭಾಗದಲ್ಲಿ ಆಳುತ್ತಿದ್ದ ಶಿಲಾಹಾರ ಮನೆತನವು ಮತ್ತು (೪) ಪಶ್ಚಿಮ ಕರಾವ ಯಲ್ಲಿ ೧೬ನೆಯ ಶತಮಾನದಲ್ಲಿದ್ದ ನಗಿರೆ ಮತ್ತು ಹಾಡುವಳ್ಳಿ ಮಾಂಡಲಿಕರ ಮುಂತಾದವರವೇ ಆ ರಾಜಮನೆತನಗಳು.

ರಾಜರ ವೃತ್ತಾಂತವನ್ನು ಒಳಗೊಂಡಿರುವವಲ್ಲದೆ ಆ ಆ ಕಾಲದ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಮುಂತಾದ ವಿಷಯಗಳನ್ನು ತಿಳಿದುಕೊಳ್ಳಲು ಈ ಶಾಸನಗಳು ಸಹಾಯಕಾರಿಯಾಗಿವೆ.

**ವಡಗಾಂವ-ಮಾಧವಪೂರದ ಷಟ್ಕೋಣಾಕಾರದ ಸ್ತಂಭ ಶಿಲಾಲಿಪಿಯು** ಬಹಳ ಮಹತ್ವದ್ದಿದೆ. ಇದನ್ನು ಪ್ರಾಕೃತಭಾಷೆಯಲ್ಲಿ, ಬ್ರಾಹ್ಮೀ ಲಿಪಿಯಲ್ಲಿ ಬರೆದಿದೆ. ಅವರ ಕಾಲ ಸುಮಾರು ಕ್ರಿ. ಶ. ಪೂ. ೧ನೆಯ ಶತಮಾನ. ಈ ಶಾಸನದಲ್ಲಿ ಕಸಪಗೋತ (ಕಶ್ಯಪಗೋತ್ರದ) ಒಬ್ಬ ಮನುಷ್ಯನು ಕೆಲವು ಯಜ್ಞಯಾಗಾದಿಗಳನ್ನು ಮಾಡಿರುವನೆಂದು ಬರೆದಿದೆ. ಇದು ಮುಂಬೈ ಕರ್ನಾಟಕದಲ್ಲಿ ಇದುವರೆಗೆ ಸಿಕ್ಕ ವೈದಿಕ ಯಜ್ಞಯಾಗಾದಿಗಳನ್ನು ಕುರಿತು ಹೇಳುವ ಅತ್ಯಂತ ಪ್ರಾಚೀನ ಯಜ್ಞಸ್ತಂಭ (ಯೂಪ) ಶಾಸನವೆಂದು ಹೇಳಬಹುದು. ಏಕೆಂದರೆ ಇಲ್ಲಿಯುವರೆಗೂ ಈ ಭಾಗದಲ್ಲಿ ದೊರೆತಿದ್ದ ಪ್ರಾಚೀನ ಶಾಸನಗಳು ಅಶೋಕ ಸಾಮ್ರಾಟನವಾಗಿದ್ದು ಬೌದ್ಧಧರ್ಮಕ್ಕೆ ಸಂಬಂಧಿಸಿದವಾಗಿವೆ. **ಬದಾಮಿಯಲ್ಲಿ ಬಂಡೆಗಲ್ಲಿನ ಮೇಲೆ ಕೊರೆದ ೪೬೫ ನೆಯ ಶಕವರ್ಷದ ಶಾಸನವು** ಚಲುಕ್ಯ ವಲ್ಲಭೇಶ್ವರನದಿದ್ದು ಆ ಅರಸನು ಕೆಳಗಿನಿಂದಲೂ ಮೇಲಿನಿಂದಲೂ ದುರ್ಗಮವಾದ ವಾತಾಪಿ (ಬಾದಾಮಿ) ದುರ್ಗವನ್ನು ಕಟ್ಟಿಸಿದನೆಂದು ಹೇಳಿದೆ. ಇಲ್ಲಿ ಉಕ್ತವಾದ ವಲ್ಲಭೇಶ್ವರನೇ ೧ನೆಯ ಪುಲಕೇಶಿ. ೧ನೆಯ ಪುಲಕೇಶಿಯ ಶಾಸನಗಳು ಈ ವರೆಗೆ ಎಲ್ಲಿಯೂ ದೊರೆತಿರಲಿಲ್ಲ. ಆದುದರಿಂದ ಈ ಶಾಸನವು ಮಹತ್ವವುಳ್ಳದ್ದಾಗಿದೆ. ಇದಲ್ಲದೆ ಇನ್ನೊಂದು ಮಹತ್ವದ ವಿಷಯವೆಂದರೆ ಈ ಶಾಸನವೇ ಶಕವರುಷವನ್ನು ಉಲ್ಲೇಖಿಸಿರುವ – ಇದುವರೆಗೆ ದೊರೆತ ಶಾಸನಗಳಲ್ಲಿ— ಅತ್ಯಂತ ಪ್ರಾಚೀನವಾದುದು. ಇದಕ್ಕೂ ಮೊದಲು ಇದೇ ಊರಿನ ಮೂರನೆಯ ಗವಿಯಲ್ಲಿದ್ದ ೫೦೦ನೆಯ ಶಕವರ್ಷದ ಶಾಸನವೇ ಶಕವರ್ಷವನ್ನು ಹೇಳುವ ಅತಿ ಮೊದಲನೆಯ ಶಾಸನವೆಂದು ಗಣಿಸಲಾಗುತ್ತಿತ್ತು. ಭಾರತದ ಬೇರೆ ಯಾವ ಭಾಗದಲ್ಲಿಯೂ ಇಷ್ಟು ಪ್ರಾಚೀನವಾದ ಶಕವರ್ಷವನ್ನು ಹೇಳುವ ಶಾಸನವು ದೊರೆತಿಲ್ಲ.

ಈ ಸಂಸ್ಥೆಯಲ್ಲಿದ್ದ ತಾಮ್ರಶಾಸನಗಳಲ್ಲಿ ಕ್ರಿ. ಶ. ೬ನೆಯ ಶತಮಾನದಲ್ಲಿದ್ದ ಕದಂಬ ೨ನೆಯ ಕೃಷ್ಣವರ್ಮನ ಕಿರುಕುಪ್ಪದೂರ ತಾಮ್ರ ಶಾಸನ, ಅದೇ ಕಾಲದ ಪೂಗವರ್ಮನ ಮುಧೋಳ ತಾಮ್ರಶಾಸನ, ತತ್ಸಮಕಾಲದ ಭೋಜ ಕಾಪಾಲಿವರ್ಮನ ಅರಗಾ ತಾಮ್ರಶಾಸನ ಮತ್ತು ಚಾಲುಕ್ಯ ಇರಿವ ಬೆಡಂಗ ಸತ್ಯಾಶ್ರಯನ ೯೨೧ನೆಯ ಶಕದ ಬೆಡಕೀಹಾಳ ತಾಮ್ರಶಾಸನ ಇವು ಒಂದೊಂದು ದೃಷ್ಟಿಯಿಂದ ಮಹತ್ವದವಾಗಿವೆ. ಅವುಗಳಿಂದ ಕರ್ನಾಟಕ ಇತಿಹಾಸದ ಮೇಲೆ ಹೆಚ್ಚಿನ ಬೆಳಕು ಬಿದ್ದಿದೆ. ಮುಂಬೈಯ ಪ್ರೊ. ಎ. ಕೆ. ಪ್ರಿಯೋಳಕರರು ಕೊಟ್ಟು ಕಳಿಸಿದ ತಾಮ್ರಪಟಗಳ ೯ ಫೋಟೊ ಪ್ರಿಂಟುಗಳನ್ನು ಅಭ್ಯಾಸಮಾಡಲಾಗಿ ಅವುಗಳಿಂದ ಮತ್ತೂ

**ಪ್ರಾಗೈತಿಹಾಸಿಕ ಸನ್ನಿವೇಶಗಳ ಅಭ್ಯಾಸ:—** ಈಗ ೫೦-೬೦ ವರುಷಗಳ ಹಿಂದೆ ಬ್ರೂಸ ಫೂಟ ಎಂಬ ಆಂಗ್ಲ ಭೂಗರ್ಭ ತತ್ತ್ವಜ್ಞನು ನೋಡಿದನಂತರ ಕರ್ನಾಟಕದಲ್ಲಿ ಈ ವಿಷಯವನ್ನು ಯಾರೂ ಮುಂದುವರಿಸಿರಲಿಲ್ಲ. ಇದನ್ನು ಮೊದಲು ಕೈಕೊಂಡ ಶ್ರೇಯಸ್ಸು ಈ ಸಂಸ್ಥೆಗಿದೆ.

## ಶಾಸನಗಳು

ಮುಂಬೈ ರಾಜ್ಯದ ಎಲ್ಲ ಕನ್ನಡ ಜಿಲ್ಹೆಗಳಲ್ಲಿಯ ಶಾಸನ, ಕೈಬರೆಹದ ಗ್ರಂಥ ಮತ್ತು ಇತರ ಸಾಂಸ್ಕೃತಿಕ ಅವಶೇಷಗಳನ್ನು ಕಲೆಹಾಕುವ ಕೆಲಸವು ಪ್ರತಿವರುಷ ಸಾಗುತ್ತಲೇ ಇದೆ.

ಇಲ್ಲಿಯ ವರೆಗೆ ಸಂಸ್ಥೆಯು ಸುಮಾರು ೯೦೦ ಶಿಲಾಲಿಪಿಗಳ ನಕಲು ತೆಗೆದು ಅವುಗಳ ಅಭ್ಯಾಸಮಾಡಿದೆ. ಸಂಚಾರದಲ್ಲಿ ದೊರಕಿಸಿದ ೪೦ ತಾಮ್ರ ಶಾಸನಗಳನ್ನು ಪರಿಶೀಲಿಸಿದೆ. ಇವೆಲ್ಲವುಗಳು ಕ್ರಿ. ಪೂ. ೧ನೆಯ ಶತಮಾನದಿಂದ ಕ್ರಿ. ಶ. ೧೭ನೆಯ ಶತಮಾನ ಇವುಗಳ ನಡುವಿನ ಕಾಲಾವಧಿಗೆ ಸೇರುತ್ತವೆ. ಅವು ಕರ್ನಾಟಕದಲ್ಲಿ ರಾಜ್ಯಭಾರ ನಡೆಸಿದ (೧) ಬನವಾಸಿಯ ಕದಂಬರು (೨) ಬದಾಮಿಯ ಚಾಲುಕ್ಯರು (೩) ಮಳಖೇಡದ ರಾಷ್ಟ್ರಕೂಟರು (೪) ಕಲ್ಯಾಣಿಯ ಚಾಲುಕ್ಯರು ಮತ್ತು ಕಲಚೂರ್ಯರು (೫) ದೇವಗಿರಿಯ ಯಾದವರು (೬) ದೋರಸಮುದ್ರದ ಹೊಯ್ಸಳರು ಮತ್ತು (೭) ವಿಜಯನಗರದ ಮನೆತನಗಳು ಮುಂತಾದ ಸುಪ್ರಸಿದ್ಧ ರಾಜಮನೆತನಕ್ಕೆ ಸಂಬಂಧಪಟ್ಟಿರುವವು. ಇವುಗಳ ಹೊರತು ಆ ರಾಜಮನೆತನಗಳ ಕಾಲದಲ್ಲಿದ್ದ ಅನೇಕ ಮಾಂಡಲಿಕ ರಾಜಮನೆತನಗಳ ಇತಿಹಾಸವು ಅವುಗಳಲ್ಲಿ ಅಡಕವಾಗಿವೆ. ಈ ಅರಸುಮನೆತನಗಳಿಗೆ ಸಂಬಂಧಿಸಿದ ಹೊಸ ಸಂಗತಿಗಳನ್ನು ಈ ಶಾಸನಗಳು ತಿಳಿಸುವವಲ್ಲದೆ ಈ ವರೆಗೂ ಗೊತ್ತಾಗದೆ ಉಳಿದ ಹೊಸ ರಾಜಮನೆತನಗಳನ್ನೂ ಮೊದಲನೆಯ ಸಲ ಬೆಳಕಿಗೆ ತಂದಿವೆ.

(೧) ೬-೭ನೆಯ ಶತಮಾನದಲ್ಲಿ ಆಳಿದ ಗೋವೆಯ ಪ್ರಾಂತದ ಭೋಜ ಅರಸರು (೨) ೧೧-೧೨ನೆಯ ಶತಮಾನದಲ್ಲಿದ್ದ ಚಂದಾವರದ ಕದಂಬರು (೩) ಅದೇ ಕಾಲದಲ್ಲಿ ಅಕ್ಕಲಕೋಟಿ, ಇಂಡಿ, ಸಿಂದಗಿ, ಜತ್ ಮತ್ತು ಅಥಣಿ ಭಾಗದಲ್ಲಿ ಆಳುತ್ತಿದ್ದ ಶಿಲಾಹಾರ ಮನೆತನವು ಮತ್ತು (೪) ಪಶ್ಚಿಮ ಕರಾವಳಿಯಲ್ಲಿ ೧೬ನೆಯ ಶತಮಾನದಲ್ಲಿದ್ದ ನಗಿರೆ ಮತ್ತು ಹಾಡುವಳ್ಳಿ ಮಾಂಡಲಿಕರು ಮುಂತಾದವರವೇ ಆ ರಾಜಮನೆತನಗಳು.

ರಾಜರ ವೃತ್ತಾಂತವನ್ನು ಒಳಗೊಂಡಿರುವವಲ್ಲದೆ ಆ ಆ ಕಾಲದ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಮುಂತಾದ ವಿಷಯಗಳನ್ನು ತಿಳಿದುಕೊಳ್ಳಲು ಈ ಶಾಸನಗಳು ಸಹಾಯಕಾರಿಯಾಗಿವೆ.

**ವಡಗಾಂವ-ಮಾಧವಪೂರದ ಷಟ್ಕೋಣಾಕಾರದ ಸ್ತಂಭ ಶಿಲಾಲಿಪಿಯು** ಬಹಳ ಮಹತ್ವದ್ದಿದೆ. ಇದನ್ನು ಪ್ರಾಕೃತಭಾಷೆಯಲ್ಲಿ, ಬ್ರಾಹ್ಮೀ ಲಿಪಿಯಲ್ಲಿ ಬರೆದಿದೆ. ಇದರ ಕಾಲ ಸುಮಾರು ಕ್ರಿ. ಶ. ಪೂ. ೧ನೆಯ ಶತಮಾನ. ಈ ಶಾಸನದಲ್ಲಿ ಕಸಪಗೋತ (ಕಶ್ಯಪಗೋತ್ರದ) ಒಬ್ಬ ಮನುಷ್ಯನು ಕೆಲವು ಯಜ್ಞಯಾಗಾದಿಗಳನ್ನು ಮಾಡಿರುವನೆಂದು ಬರೆದಿದೆ. ಇದು ಮುಂಬೈ ಕರ್ನಾಟಕದಲ್ಲಿ ಇದುವರೆಗೆ ಸಿಕ್ಕ ವೈದಿಕ ಯಜ್ಞಯಾಗಾದಿಗಳನ್ನು ಕುರಿತು ಹೇಳುವ ಅತ್ಯಂತ ಪ್ರಾಚೀನ ಯಜ್ಞಸ್ತಂಭ (ಯೂಪ) ಶಾಸನವೆಂದು ಹೇಳಬಹುದು. ಏಕೆಂದರೆ ಇಲ್ಲಿಯವರೆಗೂ ಈ ಭಾಗದಲ್ಲಿ ದೊರೆತಿದ್ದ ಪ್ರಾಚೀನ ಶಾಸನಗಳು ಅಶೋಕ ಸಾಮ್ರಾಟನವಾಗಿದ್ದು ಬೌದ್ಧಧರ್ಮಕ್ಕೆ ಸಂಬಂಧಿಸಿದವಾಗಿವೆ. **ಬದಾಮಿಯಲ್ಲಿ ಬಂಡೆಗಲ್ಲಿನ ಮೇಲೆ ಕೊರೆದ ೪೬೫ ನೆಯ ಶಕವರ್ಷದ ಶಾಸನವು** ಚಲುಕ್ಯ ವಲ್ಲಭೇಶ್ವರನದಿದ್ದು ಆ ಅರಸನು ಕೆಳಗಿನಿಂದಲೂ ಮೇಲಿನಿಂದಲೂ ದುರ್ಗಮವಾದ ವಾತಾಪಿ (ಬಾದಾಮಿ) ದುರ್ಗವನ್ನು ಕಟ್ಟಿಸಿದನೆಂದು ಹೇಳಿದೆ. ಇಲ್ಲಿ ಉಕ್ತವಾದ ವಲ್ಲಭೇಶ್ವರನೇ ೧ನೆಯ ಪುಲಕೇಶಿ. ೧ನೆಯ ಪುಲಕೇಶಿಯ ಶಾಸನಗಳು ಈ ವರೆಗೆ ಎಲ್ಲಿಯೂ ದೊರೆತಿರಲಿಲ್ಲ. ಆದುದರಿಂದ ಈ ಶಾಸನವು ಮಹತ್ವವುಳ್ಳದ್ದಾಗಿದೆ. ಇದಲ್ಲದೆ ಇನ್ನೊಂದು ಮಹತ್ವದ ವಿಷಯವೆಂದರೆ ಈ ಶಾಸನವೇ ಶಕವರುಷವನ್ನು ಉಲ್ಲೇಖಿಸಿರುವ – ಇದುವರೆಗೆ ದೊರೆತ ಶಾಸನಗಳಲ್ಲಿ— ಅತ್ಯಂತ ಪ್ರಾಚೀನವಾದುದು. ಇದಕ್ಕೂ ಮೊದಲು ಇದೇ ಊರಿನ ಮೂರನೆಯ ಗವಿಯಲ್ಲಿದ್ದ ೫೦೦ನೆಯ ಶಕವರ್ಷದ ಶಾಸನವೇ ಶಕವರ್ಷವನ್ನು ಹೇಳುವ ಅತಿ ಮೊದಲನೆಯ ಶಾಸನವೆಂದು ಗಣಿಸಲಾಗುತ್ತಿತ್ತು. ಭಾರತದ ಬೇರೆ ಯಾವ ಭಾಗದಲ್ಲಿಯೂ ಇಷ್ಟು ಪ್ರಾಚೀನವಾದ ಶಕವರ್ಷವನ್ನು ಹೇಳುವ ಶಾಸನವು ದೊರೆತಿಲ್ಲ.

ಈ ಸಂಸ್ಥೆಯಲ್ಲಿದ್ದ ತಾಮ್ರಶಾಸನಗಳಲ್ಲಿ ಕ್ರಿ. ಶ. ೬ನೆಯ ಶತಮಾನದಲ್ಲಿದ್ದ ಕದಂಬ ೨ನೆಯ ಕೃಷ್ಣವರ್ಮನ ಕಿರುಕುಪ್ಪದೂರ ತಾಮ್ರ ಶಾಸನ, ಅದೇ ಕಾಲದ ಪೂಗವರ್ಮನ ಮುಧೋಳ ತಾಮ್ರಶಾಸನ, ತತ್ಸಮಕಾಲದ ಭೋಜ ಕಾಪಾಲಿ-ವರ್ಮನ ಅರಗಾ ತಾಮ್ರಶಾಸನ ಮತ್ತು ಚಾಲುಕ್ಯ ಇಱುವ ಬೆಡಂಗ ಸತ್ಯಾಶ್ರಯನ ೯೩೧ನೆಯ ಶಕದ ಬೆಡಕೀಹಾಳ ತಾಮ್ರಶಾಸನ ಇವು ಒಂದೊಂದು ದೃಷ್ಟಿಯಿಂದ ಮಹತ್ವದವಾಗಿವೆ. ಅವುಗಳಿಂದ ಕರ್ನಾಟಕ ಇತಿಹಾಸದ ಮೇಲೆ ಹೆಚ್ಚಿನ ಬೆಳಕು ಬಿದ್ದಿದೆ. ಮುಂಬೈಯ ಪ್ರೊ. ಎ. ಕೆ. ಪ್ರಿಯೋಳೀಕರರು ಕೊಟ್ಟು ಕಳಿಸಿದ ತಾಮ್ರಪಟಗಳ ೯ ಫೋಟೊ ಪ್ರಿಂಟುಗಳನ್ನು ಅಭ್ಯಾಸಮಾಡಲಾಗಿ ಅವುಗಳಿಂದ ಮತ್ತೂ

ಎರಡು ಹೊಸ ಭೋಜ ಅರಸರ ಹೆಸರುಗಳು ಕಂಡುಬಂದವು. ಪೃಥ್ವೀಮಲ್ಲ ವರ್ಮನ್ ಮತ್ತು ಅನಿರ್ಜಿತವರ್ಮನ್ ಎಂಬವೇ ಆ ಅರಸರ ಹೆಸರುಗಳು. ಅವರು ಕ್ರಿ. ಶ. ೬ನೆಯ ಶತಮಾನದಲ್ಲಿ ಗೋವೆ ಮತ್ತು ಕಾರವಾರ ಭಾಗದಲ್ಲಿ ರಾಜ್ಯವಾಳುತ್ತಿದ್ದರು.

ಮುಧೋಳ ಮತ್ತು ಬೆಡಕೀಹಾಳ ತಾಮ್ರಶಾಸನಗಳಿಗೆ ಅನುಕ್ರಮವಾಗಿ ಹನುಮಾನ್ ಮತ್ತು ಮಹಿಷಾಸುರಮರ್ದಿನಿ ರಾಜಮುದ್ರೆಯಾಗಿರುವುದು ಮಹತ್ವದ ವಿಷಯ.

ಇಲ್ಲಿಯ ವರೆಗೆ ಕಲೆಹಾಕಿದ ಶಾಸನಗಳಿಂದ ಕರ್ನಾಟಕದ ಇತಿಹಾಸಕ್ಕೂ ಸಂಸ್ಕೃತಿಯ ಅಧ್ಯಯನಕ್ಕೂ ಯಾವ ಹೊಸ ಬೆಳಕು ಬಿದ್ದಿರುವದೆಂಬುದನ್ನು ಈ ಸಂಸ್ಥೆಯ ಪ್ರಕಟನೆಗಳಲ್ಲಿ ವಿಸ್ತಾರವಾಗಿ ವಿವೇಚಿಸಿದೆ.

## ನಾಣ್ಯಗಳು

ದಕ್ಷಿಣಭಾರತದ ನಾಣ್ಯಗಳನ್ನು ಅಷ್ಟು ಚನ್ನಾಗಿ, ಶಾಸ್ತ್ರೀಯವಾಗಿ ಅಭ್ಯಾಸ ಮಾಡಿಲ್ಲವೆಂದು ಹೇಳಬಹುದು. ಉತ್ತರ ಭಾರತದಲ್ಲಿ ಅಲ್ಲಿ ಸಿಕ್ಕ ನಾಣ್ಯಗಳನ್ನು ವಿದ್ವಾಂಸರು ಸಾಕಷ್ಟು ಸೂಕ್ಷ್ಮವಾಗಿ ಪರಿಶೀಲಿಸಿದ್ದಾರೆ. ನಮ್ಮ ಕರ್ನಾಟಕ ದಲ್ಲಿಯೂ ಪ್ರಾಚೀನನಾಣ್ಯಗಳು ಸಿಗುತ್ತಲೇ ಇವೆ.ಆದರೆ ಅವುಗಳನ್ನು ಸಂಗ್ರಹಿಸಿ ಅಭ್ಯಾಸಮಾಡುವ ಮನೋವೃತ್ತಿ ಇರಬೇಕಾದಷ್ಟು ಇಲ್ಲದ್ದರಿಂದ ಅವೆಷ್ಟೋ ನಾಶ ಹೊಂದಿವೆಯೆಂದು ವಿಷಾದ ಪಡಬೇಕಾಗಿದೆ. ಆ ಕಾರಣವಾಗಿಯೂ ಇಂಥ ನಾಣ್ಯ ಗಳ ಅಭ್ಯಾಸದಿಂದ ಏನಾದರೂ ಹೊಸ ವಿಷಯಗಳು ದೊರೆಯುವವೆಂಬ ಇಚ್ಛೆ-ಯಿಂದಲೂ ನಾಣ್ಯಗಳ ಸಂಕಲನಕಾರ್ಯವನ್ನು ಸಂಸ್ಥೆಯು ಕೈಕೊಂಡಿತು. ಈಗಾ-ಗಲೆ ಬಹಳ ನಾಣ್ಯಗಳು ಸಿಕ್ಕಿವೆ. ಅವುಗಳಲ್ಲಿ ವಿಜಯನಗರದ ಮತ್ತು ಮರಾಠಾ-ಕಾಲದ ತಾಮ್ರನಾಣ್ಯಗಳೇ ವಿಶೇಷವಾಗಿರುವವು.

ಆಲ್ ಇಂಡಿಯಾ ನ್ಯುಮಿಸ್ಮ್ಯಾಟಿಕ್ ಸೊಸಾಯಿಟಿಯ ಜರ್ನಲದ ಐದ-ನೆಯ ಸಂಪುಟದಲ್ಲಿ ಡಾಯಕಿಕ್ಕೇರರು ವಿಜಯನಗರದ ಕೆಲವು ಪ್ರಾತಿನಿಧಿಕ ತಾಮ್ರ ನಾಣ್ಯಗಳನ್ನು ತೆಗೆದುಕೊಂಡು ಚರ್ಚಿಸಿದ್ದಾರೆ. ಇವೆಲ್ಲವುಗಳ ಮೇಲೆ ಒಂದೆಡೆ ಗರುಡನ ವಿಗ್ರಹವಿದ್ದು ಉಳಿದ ಮಗ್ಗಲಿಗೆ ಬೇರೆ ಬೇರೆ ಅರಸರ ಹೆಸರುಗಳಿವೆ. ಇಲ್ಲಿ ಬಂದ ಅರಸರು ಕೃಷ್ಣದೇವರಾಯ, ಸದಾಶಿವರಾಯ ಮತ್ತು ರಾಮರಾಯ. ಈ ನಾಣ್ಯಗಳಿಂದ ವಿಜಯನಗರದ ತಾಮ್ರನಾಣ್ಯ ಪದ್ಧತಿಯು ಹೇಗೆ ಇತ್ತೆಂಬುದು ಚನ್ನಾಗಿ ವಿಶದವಾಗುವುದು. ಉತ್ತರ ಕನ್ನಡ ಜಿಲ್ಹೆಯ ಹೊನ್ನಾವರ ತಾಲೂಕಿ-

ನಲ್ಲಿ ರಾಜಾಧಿರಾಜ ಎಂಬ ರಾಜನ ೭೫೫ ಬೆಳ್ಳಿಯ ನಾಣ್ಯಗಳು ಸಿಕ್ಕಿದ್ದು ಆ ನಾಣ್ಯಗಳ ಒಂದು ಬದಿಗೆ ಸಿಂಹವೂ ಮತ್ತೊಂದು ಬದಿಗೆ ದೇವನಾಗರಿ ಅಕ್ಷರದಲ್ಲಿ ರಾಜಾಧಿರಾಜ ಎಂಬ ಬರೆಹವೂ ಇರುವದು. ಈ ನಾಣ್ಯಗಳ ಕಾಲ, ಅವುಗಳ ಮೇಲೆ ಬರೆದ ನಾಗರಿ ಅಕ್ಷರಗಳ ಮಾದರಿಯಮೇಲಿಂದ ಸು. ಕ್ರಿ. ಶ. ೧೩-೧೪ ನೆಯ ಶತಮಾನವೆನ್ನಬಹುದು. ನಾಣ್ಯದ ಮೇಲಿರುವ ರಾಜಾಧಿರಾಜ ಎಂಬ ಅರಸನ ಹೆಸರು ಮತ್ತು ಸಿಂಹ ಇವು ಉತ್ತರ ಕನ್ನಡ ಜಿಲ್ಲೆಯಲ್ಲಿ ಚೋಳರ ವರ್ಚಸ್ಸು ಇತ್ತೆಂದು ತಿಳಿಸುತ್ತವೆ; ಮತ್ತು ಇದೇ ಕಾಲಕ್ಕೆ ಭಟಕಳದಲ್ಲಿ ಕಟ್ಟಲಾದ ಚೋಳೇಶ್ವರ ದೇವಾಲಯವೂ ಇದಕ್ಕೆ ಪುಷ್ಟಿಕೊಡುವಂತಿಲ್ಲವೆ ?

ಇದಲ್ಲದೆ, ಕೆಲವು ಬಂಗಾರದ ಮತ್ತು ಹಿತ್ತಾಳಿಯ ನಾಣ್ಯಗಳನ್ನೂ ಪರಿಶೀಲಿಸಲಾಯಿತು. ಬಂಗಾರದ ನಾಲ್ಕು ನಾಣ್ಯಗಳು ರೋಣ ತಾಲೂಕಿನಲ್ಲಿ ಸಿಕ್ಕಿವೆ. ಅವು ಎರಡು ಪ್ರಕಾರದವಿರುವವು. ಎರಡು ನಾಣ್ಯಗಳ ಒಮ್ಮಗ್ಗಲಿಗೆ ಜೂಲ ಹಾಕಿದ ಆನೆಯೂ ಮತ್ತು ಅದರ ಮಧ್ಯ ಮೇಲ್ಭಾಗದಲ್ಲಿ **ಉದ** ಎಂಬ ಎರಡು ಅಕ್ಷರಗಳೂ ಮತ್ತೊಂದು ಭಾಗದ ಮೇಲೆ ಹೂವಿನ ಸುಳುವೂ ಇರುವವು. ಇಲ್ಲಿ ಬರುವ **ಉದ** ಎಂಬ ಅಕ್ಷರಗಳು ಉದಯಾದಿತ್ಯ ಎಂಬ ರಾಜನ ಸಂಕ್ಷಿಪ್ತರೂಪವೆಂದು ಹೇಳಬಹುದು. ಈ ಅಕ್ಷರಗಳು ಕ್ರಿ.ಶ. ೧೨-೧೩ ನೆಯ ಶತಮಾನದ ಕನ್ನಡ ಅಕ್ಷರಗಳನ್ನು ಹೋಲುವುದರಿಂದ ಈ ನಾಣ್ಯಗಳಲ್ಲಿ ಉಕ್ತನಾದ ಉದಯಾದಿತ್ಯನು ಹೊಯ್ಸಳ ರಾಜನೆಂದು ತೋರುತ್ತದೆ. ಉಳಿದ ಎರಡು ನಾಣ್ಯಗಳ ಮೇಲೆ ಒಂದು ಮಗ್ಗಲಿಗೆ ಲಿಂಗವಿದ್ದ ಮೂರಂತಸ್ತಿನ ದೇವಾಲಯವೂ ಮತ್ತೊಂದು ಮುಖದ ಮೇಲೆ ಓಡುವ ಸಿದ್ಧತೆಯಲ್ಲಿ ಮುಮ್ಮುಖಮಾಡಿಕೊಂಡು ನಿಂತ ಸಿಂಹವೂ ಇವೆ. ಇಲಿಯಟ್‌ರು ಪ್ರಕಟಿಸಿದ ಕಾಯಿನ್ಸ ಆಫ್ ಸೌಥ ಇಂಡಿಯಾ (Coins of South India) ಎಂಬ ಗ್ರಂಥದಲ್ಲಿ ಇಂತಹ ನಾಣ್ಯಗಳನ್ನು ಪ್ರಕಟಿಸಿ ಅದು ಪಲ್ಲವ ಮನೆತನದ್ದೆಂದು ಹೇಳಿದ್ದಾರೆ. ಆದರೆ ಈ ನಾಣ್ಯಗಳ ರಚನೆಯ ಮೇಲಿಂದ ಮತ್ತು ಸಿಂಹವು ಇರುವದರಿಂದ ಇವು ಬಹುಶಃ ಕದಂಬರ ನಾಣ್ಯಗಳೆಂದು ತೋರುತ್ತದೆ. ಹಿತ್ತಾಳಿಯ ನಾಣ್ಯಗಳು ರಾಣೇಬೆನ್ನೂರ ತಾಲೂಕಿನಲ್ಲಿ ದೊರೆತಿವೆ. ಅವುಗಳ ಒಂದು ಭಾಗದಮೇಲೆ ನಾಗರೀ ಅಕ್ಷರದಲ್ಲಿ ಶ್ರೀಕೃಷ್ಣರಾಜ ಎಂದೂ ಮತ್ತೊಂದು ಭಾಗದ ಮೇಲೆ ಶಿವ-ಪಾರ್ವತಿಯರ ವಿಗ್ರಹಗಳೂ ಇವೆ. ಇವು ವಿಜಯನಗರದ ಕೃಷ್ಣರಾಯನ ನಾಣ್ಯಗಳೆಂದು ಹೇಳಬಹುದು.

ಇದುವರೆಗೆ ಸಂಸ್ಥೆಯು ಸಂಗ್ರಹಿಸಿದ ನಾಣ್ಯಗಳಲ್ಲಿ ಅತ್ಯಂತ ಪ್ರಾಚೀನವಾದವುಗಳು ಕೊಲ್ಹಾಪುರದಲ್ಲಿ ದೊರೆತ ಸಾತವಾಹನರ ಸೀಸದ ನಾಣ್ಯಗಳು. ಇವುಗಳ ಕಾಲ ಕ್ರಿ. ಪೂ. ೨ ನೆಯ ಶತಮಾನದಿಂದ ಕ್ರಿ. ಶ. ೨ ನೆಯ ಶತಮಾನ. ಸುಮಾರು ಅದೇ ಕಾಲದಲ್ಲಿ ಬನವಾಸಿ ಭಾಗದಲ್ಲಿ ಆಳುತ್ತಿದ್ದ ಚುಟುರಾಜರ ಕೆಲವು ನಾಣ್ಯಗಳು ಬನವಾಸಿಯಲ್ಲಿಯೆ ಸಿಕ್ಕಿವೆ. ಈ ನಾಣ್ಯಗಳು ಆ ಮನೆತನದ ಇಬ್ಬರು ರಾಜರವಿರು

ತ್ತವೆ. ಚುಟುಕುಲಾನಂದ ಮತ್ತು ಮುಳಾನಂದ ಎಂಬವರೇ ಆ ರಾಜರು. ಈ ನಾಣ್ಯಗಳು ಹೊಲದಲ್ಲಿ ಸಿಕ್ಕಿದ್ದು ಈ ಸಿಕ್ಕ ಸ್ಥಳದ ಸುತ್ತುಮುತ್ತಲೂ ಉಳುವಾಗ ತಾಮ್ರ ಮತ್ತು ಸೀಸದ ನಾಣ್ಯಗಳು ಸಿಗುತ್ತಿರುವವೆಂದು ತಿಳಿದು ಬಂದಿದೆ. ಬನವಾಸಿಯ ಹಳೆಯ ಊರು ಇಲ್ಲಿಯೆ ಇತ್ತೆಂದು ಹೇಳುವ ಇತರ ಕುರುಹುಗಳೂ ಇಲ್ಲಿ ಸಿಗುತ್ತವೆ. ಕಾರವಾರದ ಹಿಂದೂ ಹಾಯಸ್ಕೂಲಿನಲ್ಲಿದ್ದ ಕೆಲವು ನಾಣ್ಯಗಳನ್ನೂ ಮತ್ತು ಸದಾಶಿವಗಡದ ಶ್ರೀ ಬಿ. ಎಸ್. ವಾಘ ಅವರ ಮನೆಯಲ್ಲಿದ್ದ ಕೆಲವು ನಾಣ್ಯಗಳನ್ನೂ ಸಂಸ್ಥೆಯು ಪರಿಶೀಲಿಸಿದೆ. ಇವುಗಳಲ್ಲಿ ೨೦.೫ ಗ್ರೇನು ತೂಕವುಳ್ಳ ತಾಮ್ರದ ದುಂಡಾದ ನಾಣ್ಯವಿತ್ತು. ಅದರ ಒಂದು ಮಗ್ಗಲಲ್ಲಿ ಮುಂದಿನ ಬಲ ಪಾದವನ್ನೆತ್ತಿದ ಬಾಯಿ ತೆರೆದ ಸಿಂಹವೂ ಮತ್ತೊಂದು ಮಗ್ಗಲಲ್ಲಿ ೬ ದಲದ ಕಮಲವೂ ಇರುವುದರಿಂದ ಇದು ಬನವಾಸಿ ಕದಂಬರ ಪದ್ಮಟಂಕವೆಂದು ತೋರುವದು. ಈ ಪದ್ಮ-ಚಿಹ್ನವನ್ನೂ ಮತ್ತು ನಾಣ್ಯ ಪದ್ಧತಿಯನ್ನೂ ಬದಾಮಿ ಚಾಲುಕ್ಯರು ತಮ್ಮ ನಾಣ್ಯಗಳಿಗೆ ಎತ್ತಿಕೊಂಡರು. ೫೩೦ ಗ್ರೇನು ತೂಕವುಳ್ಳ ಒಂದು ಪಡಿಯಚ್ಚು ಸಹ ಅಲ್ಲಿಯೆ ದೊರೆತಿತ್ತು. ಅದರ ಮೇಲೆ ಕಮಲದ ನಾಲ್ಕು ಪಕಳೆಗಳು ಇದ್ದುದರಿಂದ ಅದು ಕದಂಬರ ನಾಣ್ಯಗಳ ಪಡಿಯಚ್ಚೆಂದು ತೋರುವದು. ಇದಲ್ಲದೆ ಛತ್ರಪತಿ ಮತ್ತು ಮುಸಲ್ಮಾನಿ ಟಂಕಸಾಲೆಗಳಿಂದ ಹೊರಬಿದ್ದ ಅನೇಕ ನಾಣ್ಯಗಳನ್ನೂ ಅಭ್ಯಸಿಸಲಾಯಿತು.

ಟ್ರೇಜರಟ್ರೋವ ನಾಣ್ಯಗಳ ಹಂಚುವಿಕೆಯಲ್ಲಿ ದೊರೆತ ಮಧ್ಯಭಾರತದ ನಾಗಮನೆತನದ ನಾಣ್ಯ, ಮೊಗಲರ ಕೆಲವು ನಾಣ್ಯ ಮುಂತಾದವುಗಳನ್ನು ವಸ್ತು ಸಂಗ್ರಹಾಲಯದ ನಾಣ್ಯವಿಭಾಗದಲ್ಲಿ ಇಟ್ಟಿದೆ.

## ಕರ್ನಾಟಕದ ವಾಸ್ತುಶಿಲ್ಪ ಮತ್ತು ಕಲೆ

ಸಂಸ್ಥೆಯು ಕರ್ನಾಟಕದ ವಾಸ್ತುಶಿಲ್ಪ ಮತ್ತು ಇತರ ಕಲೆಗಳ ಅಭ್ಯಾಸದ ಬಗೆಗೆ ಹೆಚ್ಚು ಗಮನವನ್ನಿತ್ತಿದೆ. ಬದಾಮಿ, ಐಹೊಳೆ, ಪಟ್ಟದಕಲ್ಲು, ಲಕ್ಕುಂಡಿ, ಹಂಪಿ ಮುಂತಾದ ಹಲವು ಪ್ರಮುಖ ಕಲಾಕೇಂದ್ರಗಳನ್ನು ನಿರೀಕ್ಷಿಸಿ ಅಲ್ಲಿಯ ಐತಿಹಾಸಿಕ ಸಂಗತಿಗಳನ್ನು ಮತ್ತು ಕಲೆಯ ವೈಶಿಷ್ಟ್ಯವನ್ನು ಅಭ್ಯಸಿಸಲಾಯಿತು. ಡಾಯರೆಕ್ಟರರು ಪಟ್ಟದಕಲ್ಲಿನ ಐತಿಹಾಸಿಕ ಮತ್ತು ಕಲಾವಶೇಷಗಳ ವಿಷಯವಾಗಿ ಒಂದು ಪ್ರಬಂಧವನ್ನು ಬರೆದು ಸಂಸ್ಥೆಯ "Progress of Kannada Research in Bombay Province for 1941–46" ಎಂಬ ಪ್ರಕಟನೆಯಲ್ಲಿ ಈಗಾಗಲೆ ಪ್ರಸಿದ್ಧಿಸಿದ್ದಾರೆ. ಇದೇ ವಿಷಯವಾಗಿ ಅವರು ಕೆ. ಎನ್. ದೀಕ್ಷಿತ ಸ್ಮಾರಕ-ಸಂಪುಟದಲ್ಲಿ ಒಂದು ಲೇಖನವನ್ನು ಪ್ರಕಟಿಸಿರುವರು. ಉಳಿದ

ಚಿತ್ರ ೩



ಅಜಂತೆಯ ಗುಹೆಯಲ್ಲಿಯ ವರ್ಣ ಚಿತ್ರಗಳು. ( ಒಂದು ಭಾಗ ) (ಪುಟ ೨೦)

ಊರುಗಳ ಕಲಾವಶೇಷಗಳ ವಿವೇಚನೆಯೂ ಸಹ ಪ್ರಕಟನೆಗೆ ಸಿದ್ಧವಾಗಿದೆ. **'ಕರ್ನಾಟಕದ ವಾಸ್ತುಶಿಲ್ಪ'** ಎಂಬ ಗ್ರಂಥವನ್ನು ತಯಾರಿಸುವದಕ್ಕೋಸ್ಕರ ಗುಪ್ತ, ಚಾಲುಕ್ಯ, ಹೊಯ್ಸಳ, ವಿಜಯನಗರ ಮುಂತಾದ ಕಾಲಗಳ ಕರ್ನಾಟಕದ ನೂರಾರು ಗುಡಿಗಳನ್ನು ಪರೀಕ್ಷಿಸಿ ಅಭ್ಯಾಸಮಾಡಿದ್ದಾರೆ. ಅದೇ ರೀತಿಯಲ್ಲಿ ಕರ್ನಾಟಕದ ಮೂರ್ತಿ ಶಿಲ್ಪವಿಕಾಸವನ್ನು ಅಭ್ಯಸಿಸಲು ಇಲ್ಲಿಯ ಗುಡಿಗಳಲ್ಲಿಯ ಕಲ್ಲಿನ ಮತ್ತು ಧಾತುಗಳ ವಿಗ್ರಹಗಳ ಸಶಾಸ್ತ್ರ ಅಭ್ಯಾಸವನ್ನೂ ಕೈಕೊಂಡಿದ್ದಾರೆ. ಈಗಾಗಲೆ ಈ ವಿಷಯದಲ್ಲಿ ಸಾಕಷ್ಟು ಪ್ರಗತಿಯಾಗಿದೆ. ಈ ರೀತಿಯ ಅಭ್ಯಾಸದಿಂದ ಕರ್ನಾಟಕದ ವಾಸ್ತುಶಿಲ್ಪದ ಬೆಳವಣಿಗೆ ಹೇಗಾಯಿತೆಂಬುದು ಕಂಡುಬಂದಿದೆ. ಅದು ಹೀಗೆ:—

(೧) ಭಾರತದಲ್ಲಿ ಅತ್ಯಂತ ಪ್ರಾಚೀನ ಕಟ್ಟಡಗಳು ಪ್ರಾಗೈತಿಹಾಸಿಕ ಕಾಲದ ಉಳಿಮುಟ್ಟದ ದೊಡ್ಡ ಕಲ್ಲಿನಿಂದ ನಿರ್ಮಿತವಾದ ಸ್ಮಾರಕ ಗೋರಿಗಳು. ಇವುಗಳಿಗೆ ಇಂಗ್ಲೀಷಿನಲ್ಲಿ 'ಡೊಲ್ಮೆನ್ಸ್' ಎನ್ನುವರು. ಇವನ್ನು ಪುರಾಣವಸ್ತು ಶಾಸ್ತ್ರಗಳ ಮೇರೆಗೆ ದೊಡ್ಡ ಕಲ್ಲುಗಳ ಕಾಲಕ್ಕೆ (Megalithic age) ಸೇರಿಸುವರು. ಇವುಗಳ ಕಾಲ ಸು. ಕ್ರಿ. ಪೂ. ೧೫೦೦–೧೦೦೦. ಈ ಕಟ್ಟಡಗಳು ಸಾದಾ ಇದ್ದು ಚಚ್ಚೌಕು ಅಥವಾ ಚೌಕಾಗಿರುವವು.

ಯಜ್ಞಕುಂಡ ಅಥವಾ ವೇದಿಗಳು ದೇವಗೃಹ ನಿರ್ಮಾಣವನ್ನು ಸೂಚಿಸುತ್ತವೆ. ಬೌದ್ಧರು ಈ ವೇದಿ ಕಟ್ಟಡಗಳನ್ನು ಲಕ್ಷಿಸಿಯೆ ಗುಮ್ಮಟವುಳ್ಳ ಸ್ತೂಪ ಮತ್ತು ಚೈತ್ಯಗಳನ್ನು ತಯಾರಿಸಿದರು. ಬೌದ್ಧ ಸ್ತೂಪ, ಚೈತ್ಯಗಳು ಗೋಪುರವುಳ್ಳ ಸಾದಾ ಗುಡಿಗಳ ನಿರ್ಮಾಣಕ್ಕೆ ಮಾದರಿಯನ್ನೊದಗಿಸಿದವು.

(೨) ಭಾರತದಲ್ಲಿ ಅತ್ಯಂತ ಪ್ರಾಚೀನವಾದ ದೇವಾಲಯವು ಗುಪ್ತರ ಕಾಲದಲ್ಲಿ ನಿರ್ಮಿತವಾಗಿರುವದು. ಈ ಕಾಲ ಕ್ರಿ. ಶ. ೪–೫ನೆಯ ಶತಮಾನ. ಈ ಗುಡಿಗಳು ಸಪಾಟಾದ ಮಾಳಿಗೆಯುಳ್ಳವಿದ್ದು ಗರ್ಭಗುಡಿ ಒಂದರಿಂದಲೆ ರಚಿತವಾಗಿರುವವು. ಗುಪ್ತರ ವಾಸ್ತುಶಿಲ್ಪವು ಕರ್ನಾಟಕದಲ್ಲಿ ಪಸರಿಸಿತ್ತೆನ್ನುವದಕ್ಕೆ ಐಹೊಳೆಯ ಲಾಡಖಾನ ಗುಡಿ, ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ನಂದೀ ಮಂಟಪ, ದೇವಸ್ಥಾನದ ಪ್ರವೇಶದ ಮಗ್ಗಲಲ್ಲಿರುವ ಗಂಗಾ ಯಮುನೆಯರ ವಿಗ್ರಹ ಮೊದಲಾದವು ನಿದರ್ಶನಗಳಾಗಿವೆ.

ದಖ್ಖನ್ ಮತ್ತು ಕರ್ನಾಟಕದಲ್ಲಿ ಜ್ವಾಲಾಮುಖಿ ಶಿಲೆ (trap) ಯಿದ್ದ ಪ್ರದೇಶದಲ್ಲಿ ಗುಹಾಂತರ್ಗತ ದೇವಾಲಯಗಳನ್ನು ಕೊರೆದಿದ್ದಾರೆ. ಪಶ್ಚಿಮ ಭಾರತದ ಎಲಿಫಂಟಾ, ಕಾರ್ಲಾ, ಕನ್ಹೇರಿ, ಬೆಡ್ಸಾ ಇತ್ಯಾದಿ ಊರುಗಳಲ್ಲಿಯೂ ಕರ್ನಾಟಕದಲ್ಲಿ ಬದಾಮಿ, ಐಹೊಳೆ ಮೊದಲಾದ ಊರುಗಳಲ್ಲಿಯೂ ಗುಹಾಂತರ್ಗತ ದೇವಾಲಯುಗಳನ್ನು ನಿರ್ಮಿಸಿದ್ದಾರೆ.

(೩) ಕ್ರಿ. ಶ. ೬ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಬಂಡೆಗಲ್ಲ ಮೇಲೆ ಕೊರೆದ ಮತ್ತು ಗುಮ್ಮಟವುಳ್ಳ ಗುಡಿಗಳು ಕಂಡುಬರಹತ್ತಿದವು. ಗುಮ್ಮಟವು ವಾಸ್ತುಶಿಲ್ಪದಲ್ಲಿ ವೈವಿಧ್ಯವನ್ನು ತೋರಿಸಲು ವಾಸ್ತುಶಿಲ್ಪಿಗಳಿಗೆ ಅವಕಾಶ ಒದಗಿಸಿಕೊಟ್ಟಿತು.

(೪) ಕ್ರಿ. ಶ. ೭-೯ನೆಯ ಶತಮಾನಗಳಲ್ಲಿ ದಾಕ್ಷಿಣಾತ್ಯ ಮತ್ತು ಔತ್ತರೇಯ ವಾಸ್ತುಶಿಲ್ಪ ಪದ್ಧತಿಗಳು ಕೂಡಿಕೊಂಡು ಬರಬರುತ್ತ ಒಂದು ಹೊಸ ಮಾದರಿಯ ವಾಸ್ತುಶಿಲ್ಪ ಪದ್ಧತಿಯು ಪ್ರಚಾರದಲ್ಲಿ ಬರುವುದಕ್ಕೆ ಸಹಾಯಕವಾದವು. ದ್ರಾವಿಡ ಅಥವಾ ಪಲ್ಲವ ವಾಸ್ತುಶಿಲ್ಪವನ್ನು ಕರ್ನಾಟಕದಲ್ಲಿ ಅಳವಡಿಸಿಕೊಂಡಿದ್ದರೂ ಗುಹೆಗಳಲ್ಲಿಯ ವಾಸ್ತುಶಿಲ್ಪದ ಮೇರೆಗೆ ತಯಾರಾದ ಬದಾಮಿ ಚಾಲುಕ್ಯ ವಾಸ್ತು ಶಿಲ್ಪವು ಈ ಭಾಗದಲ್ಲೆಲ್ಲ ಪ್ರಚಾರದಲ್ಲಿ ಬಂದಿತು.

(೫) ಕ್ರಿ. ಶ. ೧೦-೧೩ನೆಯ ಶತಮಾನಗಳಲ್ಲಿ ಬದಾಮಿ ಚಾಲುಕ್ಯರ ಮತ್ತು ಮೊದಲಿನ ಪಲ್ಲವರ ಕಾಲದ ವಾಸ್ತುಪದ್ಧತಿಗಳು ರಾಷ್ಟ್ರಕೂಟ ಮತ್ತು ಕಲ್ಯಾಣಿ ಚಾಲುಕ್ಯರ ಆಳಿಕೆಯಲ್ಲಿ ಒಂದಕ್ಕೊಂದು ಕೂಡಿಕೊಂಡು ಹೊಸಮಾದ-ರಿಯ ವಾಸ್ತುಶಿಲ್ಪವನ್ನು ಅಸ್ತಿತ್ವದಲ್ಲಿ ತಂದವು. ಈ ರೀತಿ ಕಟ್ಟಲಾದ ದೇವಾಲಯಗಳು ದಖ್ಖನ್ ಮತ್ತು ಕರ್ನಾಟಕದಲ್ಲಿ ಈಗಲೂ ನೋಡಲಿಕ್ಕೆ ಸಿಗುತ್ತವೆ. **ಕಲ್ಯಾಣಿ ಚಾಲುಕ್ಯರ ಪೋಷಣೆಯಲ್ಲಿ ಕರ್ನಾಟಕದ ವಾಸ್ತುಶಿಲ್ಪ ಮತ್ತು ಇತರ ಕಲೆಗಳು ಅತ್ಯಂತ ಘನತೆಗೇರಿದ್ದವು.**

(೬) ಮೈಸೂರು ದೇವಾಲಯಗಳಲ್ಲಿ ಕಂಡುಬರುವ **ಹೊಯ್ಸಳ ವಾಸ್ತು ಪದ್ಧತಿಯು ಕಲ್ಯಾಣಿ ಚಾಲುಕ್ಯ ಪದ್ಧತಿಯು ಬೆಳವಣಿಗೆಯೆ ಆಗಿದೆ.** ಆದರೆ ಅದರ ನೆರೆಹೊರೆ ಪ್ರಾಂತವಾದ ತಮಿಳು ಭಾಗದಲ್ಲಿದ್ದ ಚೋಳ ವಾಸ್ತು ಶಿಲ್ಪದ ವರ್ಚಸ್ಸು ಅದರ ಮೇಲೆ ಆಗಿದೆ. ಈ ಪದ್ಧತಿಯ ವೈಶಿಷ್ಟ್ಯವೆಂದರೆ ಗುಡಿಗಳಿಗೆ ಎತ್ತರವಾದ ಶಿಖರ,ಗೋಪುರವಿರುವದು ಮತ್ತು ವಿಶಾಲವಾದ ಪ್ರಾಕಾರವಿರುವದು. ಈ ಪದ್ಧತಿಯ ಗುಡಿಗಳೇ ವಿಜಯನಗರದ ಕಾಲದಲ್ಲಿ ಅಂದರೆ ಕ್ರಿ. ಶ. ೧೪-೧೬ನೆಯ ಶತಮಾನಗಳಲ್ಲಿ ಪರಮಾವಧಿ ಉನ್ನತಿಯನ್ನೂ, ವ್ಯಾಪ್ತಿಯನ್ನೂ ಹೊಂದಿದ್ದವು.

ವಿಜಯನಗರದ ಕಾಲದಲ್ಲಿ ದೊಡ್ಡ ಪ್ರಾಕಾರಗಳನ್ನು ಮತ್ತು ಉನ್ನತವಾದ ಗೋಪುರಗಳನ್ನು ಕಟ್ಟುವ ಪದ್ಧತಿ ಪ್ರಚಾರದಲ್ಲಿತ್ತು. ಆಗ ವಾಸ್ತುಶಿಲ್ಪಕಲೆಯು ಒಂದು ಸ್ಥಿಮಿತಕ್ಕೆ ಬಂದಿತ್ತೆಂದು ತೋರುವದು. ಅದು ಅನುಕರಣ ಮಾತ್ರವಾಗಿ ಉಳಿದಿತ್ತು.

(೭) ವಿಜಯನಗರದ ಕಾಲದ ತರುವಾಯ ಪ್ರಚಾರದಲ್ಲಿ ಬಂದ ವಾಸ್ತು ಶಿಲ್ಪವು ವಿವಿಧ ವಾಸ್ತು ಪದ್ಧತಿಗಳನ್ನು ಅಳವಡಿಸಿಕೊಂಡದ್ದಿದ್ದರೂ ಮುಸಲ್ಮಾನ

(೩) ಕ್ರಿ. ಶ. ೬ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಬಂಡೆಗಲ್ಲ ಮೇಲೆ ಕೊರೆದ ಮತ್ತು ಗುಮ್ಮಟವುಳ್ಳ ಗುಡಿಗಳು ಕಂಡುಬರಹತ್ತಿದವು. ಗುಮ್ಮಟವು ವಾಸ್ತುಶಿಲ್ಪದಲ್ಲಿ ವೈವಿಧ್ಯವನ್ನು ತೋರಿಸಲು ವಾಸ್ತುಶಿಲ್ಪಿಗಳಿಗೆ ಅವಕಾಶ ಒದಗಿಸಿಕೊಟ್ಟಿತು.


(೪) ಕ್ರಿ. ಶ. ೭–೯ನೆಯ ಶತಮಾನಗಳಲ್ಲಿ ದಾಕ್ಷಿಣಾತ್ಯ ಮತ್ತು ಔತ್ತರೇಯ ವಾಸ್ತುಶಿಲ್ಪ ಪದ್ಧತಿಗಳು ಕೂಡಿಕೊಂಡು ಬರಬರುತ್ತ ಒಂದು ಹೊಸ ಮಾದರಿಯ ವಾಸ್ತುಶಿಲ್ಪ ಪದ್ಧತಿಯು ಪ್ರಚಾರದಲ್ಲಿ ಬರುವುದಕ್ಕೆ ಸಹಾಯಕವಾದವು. ದ್ರಾವಿಡ ಅಥವಾ ಪಲ್ಲವ ವಾಸ್ತುಶಿಲ್ಪವನ್ನು ಕರ್ನಾಟಕದಲ್ಲಿ ಅಳವಡಿಸಿಕೊಂಡಿದ್ದರೂ ಗುಹೆಗಳಲ್ಲಿಯ ವಾಸ್ತುಶಿಲ್ಪದ ಮೇರೆಗೆ ತಯಾರಾದ ಬದಾಮಿ ಚಾಲುಕ್ಯ ವಾಸ್ತುಶಿಲ್ಪವು ಈ ಭಾಗದಲ್ಲೆಲ್ಲ ಪ್ರಚಾರದಲ್ಲಿ ಬಂದಿತು.

(೫) ಕ್ರಿ. ಶ. ೧೦–೧೩ನೆಯ ಶತಮಾನಗಳಲ್ಲಿ ಬದಾಮಿ ಚಾಲುಕ್ಯರ ಮತ್ತು ಮೊದಲಿನ ಪಲ್ಲವರ ಕಾಲದ ವಾಸ್ತುಪದ್ಧತಿಗಳು ರಾಷ್ಟ್ರಕೂಟ ಮತ್ತು ಕಲ್ಯಾಣಿ ಚಾಲುಕ್ಯರ ಆಳಿಕೆಯಲ್ಲಿ ಒಂದಕ್ಕೊಂದು ಕೂಡಿಕೊಂಡು ಹೊಸಮಾದರಿಯ ವಾಸ್ತುಶಿಲ್ಪವನ್ನು ಅಸ್ತಿತ್ವದಲ್ಲಿ ತಂದವು. ಈ ರೀತಿ ಕಟ್ಟಲಾದ ದೇವಾಲಯಗಳು ದಖ್ಖನ್ ಮತ್ತು ಕರ್ನಾಟಕದಲ್ಲಿ ಈಗಲೂ ನೋಡಲಿಕ್ಕೆ ಸಿಗುತ್ತವೆ. **ಕಲ್ಯಾಣಿ ಚಾಲುಕ್ಯರ ಪೋಷಣೆಯಲ್ಲಿ ಕರ್ನಾಟಕದ ವಾಸ್ತುಶಿಲ್ಪ ಮತ್ತು ಇತರ ಕಲೆಗಳು ಅತ್ಯಂತ ಘನತೆಗೇರಿದ್ದವು.**

(೬) ಮೈಸೂರು ದೇವಾಲಯಗಳಲ್ಲಿ ಕಂಡುಬರುವ **ಹೊಯ್ಸಳ ವಾಸ್ತು ಪದ್ಧತಿಯು ಕಲ್ಯಾಣಿ ಚಾಲುಕ್ಯ ಪದ್ಧತಿಯ ಬೆಳವಣಿಗೆಯೆ ಆಗಿದೆ.** ಆದರೆ ಅದರ ನೆರೆಹೊರೆ ಪ್ರಾಂತವಾದ ತಮಿಳು ಭಾಗದಲ್ಲಿದ್ದ ಚೋಳ ವಾಸ್ತುಶಿಲ್ಪದ ವರ್ಚಸ್ಸು ಅದರ ಮೇಲೆ ಆಗಿದೆ. ಈ ಪದ್ಧತಿಯ ವೈಶಿಷ್ಟ್ಯವೆಂದರೆ ಗುಡಿಗಳಿಗೆ ಎತ್ತರವಾದ ಶಿಖರ,ಗೋಪುರವಿರುವದು ಮತ್ತು ವಿಶಾಲವಾದ ಪ್ರಾಕಾರವಿರುವದು. ಈ ಪದ್ಧತಿಯ ಗುಡಿಗಳೇ ವಿಜಯನಗರದ ಕಾಲದಲ್ಲಿ ಅಂದರೆ ಕ್ರಿ. ಶ. ೧೪–೧೬ನೆಯ ಶತಮಾನಗಳಲ್ಲಿ ಪರಮಾವಧಿ ಉನ್ನತಿಯನ್ನೂ, ವ್ಯಾಪ್ತಿಯನ್ನೂ ಹೊಂದಿದ್ದವು.

ವಿಜಯನಗರದ ಕಾಲದಲ್ಲಿ **ದೊಡ್ಡ ಪ್ರಾಕಾರ**ಗಳನ್ನು ಮತ್ತು ಉನ್ನತವಾದ ಗೋಪುರಗಳನ್ನು ಕಟ್ಟುವ ಪದ್ಧತಿ ಪ್ರಚಾರದಲ್ಲಿತ್ತು. ಆಗ ವಾಸ್ತುಶಿಲ್ಪಕಲೆಯು ಒಂದು ಸ್ತಿಮಿತಕ್ಕೆ ಬಂದಿತ್ತೆಂದು ತೋರುವದು. ಅದು ಅನುಕರಣ ಮಾತ್ರವಾಗಿ ಉಳಿದಿತ್ತು.

(೭) ವಿಜಯನಗರದ ಕಾಲದ ತರುವಾಯ ಪ್ರಚಾರದಲ್ಲಿ ಬಂದ ವಾಸ್ತುಶಿಲ್ಪವು ವಿವಿಧ ವಾಸ್ತು ಪದ್ಧತಿಗಳನ್ನು ಅಳವಡಿಸಿಕೊಂಡದ್ದಿದ್ದರೂ ಮುಸಲ್ಮಾನ



ಚಲಿಕ್ಯ ವಲ್ಲಭೇಶ್ವರನ ಬಾದಾಮಿ ಬಂಡೆಗಲ್ಲು ಶಾಸನ ( ಶಕ ೪೬೫. ) (ಪುಟ ೫)

ಪಾಠ

೧ ಸ್ವಸ್ತಿ ಶಕ ವರ್ಷೇಷು ಚತುಶ್ಶತೇಷು ಪಞ್ಚಷಷ್ಟಿಯುತೇಷು [।*]
೨ ಅಶ್ವಮೇಧಾದಿಯಜ್ಞಾನಾಂ ಯಜ್ವಾ ಶ್ರೌತವಿಧಾನತಃ ।
೩ ಹಿರಣ್ಯಗರ್ಭಸಮ್ಭೂತಶ್ಚಲಿಕ್ಯೋ ವಲ್ಲಭೇಶ್ವರಃ [॥೧॥*]
೪ ಧರಾಧರೇನ್ದ್ರ ವಾತಾಪಿಮಜೇಯಮ್ಭೂತಯೇ ಭುವಃ [।*]
೫ ಅಧಸ್ತಾದುಪರಿಷ್ಟಾಚ್ಚ ದುರ್ಗ್ಗಮೇತದಚೀಕರತ್ [॥೨॥*]

“ ಶಕ ೪೬೫ನೆಯ ವರ್ಷ ಅಶ್ವಮೇಧಾದಿಯಾಗಗಳನ್ನು ಶ್ರೌತವಿಧಾನದಿಂದ ಮಾಡಿದ ‘ಹಿರಣ್ಯಗರ್ಭಸಂಭೂತ’ನಾದ ಚಲಿಕ್ಯವಲ್ಲಭೇಶ್ವರನು ಕೆಳಗಿನಿಂದಲೂ ಮೇಲಿನಿಂದಲೂ ಅಗಮ್ಯವಾದ ಬಾದಾಮಿ ಗಿರಿದುರ್ಗವನ್ನು ಕಟ್ಟಿಸಿದನು. ”

ಪದ್ಧತಿಯ ಅನುಕರಣೆಯು ಅದರಲ್ಲಿ ಒಡೆದು ಕಾಣುತ್ತದೆ. ಕ್ರಿ. ಶ. ೧೭–೧೮ ನೆಯ ಶತಮಾನಗಳಲ್ಲಿ ಆದಿಲಶಾಹಿ ವಾಸ್ತುಶಿಲ್ಪ ಪದ್ಧತಿ ಕರ್ನಾಟಕದಲ್ಲಿ ವಿಶೇಷ ಪ್ರಚಾರದಲ್ಲಿತ್ತು.

ಮುಸಲ್ಮಾನ ಪದ್ಧತಿಯಿಂದ ದೇಶೀಯ ಮೂಲಪದ್ಧತಿಗೆ ಧಕ್ಕೆ ತಗುಲಿತು. ಸ್ಥಳಿಕ ಸ್ಥಪತಿಗಳಿಗೆ ತಮ್ಮ ನಿಜವಾದ ಕಲೆಯನ್ನು ತೋರಿಸಲು ಆಸ್ಪದ ದೊರೆಯಲಿಲ್ಲ. ಬ್ರಿಟಿಶರ ಕಾಲದ ಕಟ್ಟಡಗಳು ಒಂದೇ ಮಾದರಿಯವಾಗಿ, ಸಾದಾ ಇದ್ದು ಕಲೆಗೆ ಸಾಕಷ್ಟು ಆಸ್ಪದ ಕೊಟ್ಟಿಲ್ಲ.

ಹಿಂದಕ್ಕೊಮ್ಮೆ ಕಲಾಪ್ರಪೂರ್ಣವಾಗಿ ಸ್ವಚ್ಛಂದ ರೀತಿಯಲ್ಲಿ ಬೆಳೆದಿದ್ದ ಭಾರತೀಯ ಕಲೆಯನ್ನು ಈಗ ಪುನರುಜ್ಜೀವನಗೊಳಿಸುವುದು ಅವಶ್ಯವಾಗಿದೆ. ಆ ಕಲೆಯನ್ನನುಸರಿಸಿ ಇಂದಿನ ಕಟ್ಟಡಗಳನ್ನು ಕಟ್ಟುವುದರಿಂದ ನಮ್ಮ ಸಾಂಸ್ಕೃತಿಕ ಸಂಪತ್ತನ್ನು ಕಾಯ್ದುಕೊಂಡಂತಾಗುವುದು.

## ವಿಗ್ರಹಗಳು

ಸಂಸ್ಥೆಯ ಡಾಯರೆಕ್ಟರರು ಮತ್ತು ಅವರ ಸಹಾಯಕ ಅಧಿಕಾರಿವರ್ಗದವರು ಪ್ರತಿವರ್ಷ ಕೈಕೊಳ್ಳುತ್ತಿರುವ ಪ್ರವಾಸಗಳಿಂದ ಸಂಸ್ಥೆಗೆ ಅನೇಕ ಮಹತ್ವದ ಕಲ್ಲು ಮತ್ತು ಧಾತುಮಯ ವಿಗ್ರಹಗಳು ದೊರೆತಿವೆ. ಅವನ್ನು ಬೌದ್ಧ, ಹಿಂದು, ಜೈನ ಧರ್ಮಗಳಿಗೆ ಸಂಬಂಧಿಸಿದವೆಂದು ವಿಭಾಗಿಸಬಹುದು. ಈ ರೀತಿ ಸಂಗ್ರಹಿಸಿದ ವಸ್ತುಗಳಲ್ಲಿ ಕೆಲವು ಅತ್ಯಂತ ಅಪರೂಪವಾಗಿವೆ. ಹಿಂದೂ ಮತ್ತು ಜೈನ ವಿಗ್ರಹಗಳು ಕರ್ನಾಟಕ ಮೂರ್ತಿಶಿಲ್ಪಕಲೆಯ ಅತ್ಯುತ್ತಮ ಮಾದರಿಗಳಾಗಿದ್ದು ಪೂರ್ಣ ವೈವಿಧ್ಯದಿಂದ ತುಂಬಿವೆ. ಕಲೆಹಾಕಿದ ಮಹತ್ವದ ಮೂರ್ತಿಗಳಲ್ಲಿ ರಾವಣ, ದತ್ತಾತ್ರೇಯ, ನಟರಾಜ, ಮಹಿಷಾಸುರ ಮರ್ದಿನಿ ಮುಂತಾದವುಗಳನ್ನು ಉಲ್ಲೇಖಿಸದೆ ಇರಲಾರೆವು. ಹಾಡುವಳ್ಳಿಯಿಂದ ತಂದ ಜೈನ ಮೂರ್ತಿಗಳು ಕ್ರಿ. ಶ. ೧೫–೧೬ನೆಯ ಶತಮಾನದಲ್ಲಿ ಕಂಚಿನ ಮೂರ್ತಿಗಳನ್ನು ನಿರ್ಮಿಸುವ ಕಲೆಯು ಕರ್ನಾಟಕದಲ್ಲಿ ಯಾವ ಪರಾಕಾಷ್ಠೆಯನ್ನು ಮುಟ್ಟಿತ್ತೆಂದು ಚನ್ನಾಗಿ ನಿದರ್ಶಿಸುತ್ತವೆ. ಇವುಗಳಲ್ಲಿ ತೀರ್ಥಂಕರರ ವಿಗ್ರಹಗಳು, ಕೂಷ್ಮಾಂಡಿನಿ, ಪದ್ಮಾವತಿ, ನಂದೀಶ್ವರವರದ್ವೀಪ, ಲೋಕಪಾಲಬ್ರಹ್ಮದೇವ ಮೊದಲಾದ ಮೂರ್ತಿಗಳು ಜೈನಕಲೆಯ ಉತ್ತಮ ಪ್ರತೀಕಗಳಾಗಿವೆ. ಕಲ್ಲಿನ ಮೂರ್ತಿಗಳಲ್ಲಿ ಪಟ್ಟದಕಲ್ಲಿನಿಂದ ತಂದ ನಟರಾಜನ ವಿಗ್ರಹವು ಬಹುಸುಂದರವಿದೆ. ಇದನ್ನು ತಯಾರಿಸಿದ ರೀತಿಯ ಮೇಲಿಂದ ಮತ್ತು ಅದು ದೊರೆತ ಸ್ಥಾನಮಾನಗಳ ಮೇಲಿಂದ ಇದು ಬದಾಮಿ ಚಾಲುಕ್ಯರ ಕಾಲಕ್ಕೆ ಅಂದರೆ ಸುಮಾರು ಕ್ರಿ. ಶ. ೮ ನೆಯ ಶತಮಾನದಲ್ಲಿ ತಯಾರಿಸಲ್ಪಟ್ಟಿರಬೇಕೆಂದು ನಿರ್ವಿವಾದವಾಗಿ ಹೇಳಬಹುದು.

ಪದ್ಧತಿಯ ಅನುಕರಣೆಯು ಅದರಲ್ಲಿ ಒಡೆದುಕಾಣುತ್ತದೆ. ಕ್ರಿ. ಶ. ೧೭–೧೮ನೆಯ ಶತಮಾನಗಳಲ್ಲಿ ಆದಿಲಶಾಹಿ ವಾಸ್ತುಶಿಲ್ಪ ಪದ್ಧತಿ ಕರ್ನಾಟಕದಲ್ಲಿ ವಿಶೇಷ ಪ್ರಚಾರದಲ್ಲಿತ್ತು.

ಮುಸಲ್ಮಾನ ಪದ್ಧತಿಯಿಂದ ದೇಶೀಯ ಮೂಲಪದ್ಧತಿಗೆ ಧಕ್ಕೆ ತಗುಲಿತು. ಸ್ಥಳಿಕ ಸ್ಥಪತಿಗಳಿಗೆ ತಮ್ಮ ನಿಜವಾದ ಕಲೆಯನ್ನು ತೋರಿಸಲು ಆಸ್ಪದ ದೊರೆಯಲಿಲ್ಲ. ಬ್ರಿಟಿಶರ ಕಾಲದ ಕಟ್ಟಡಗಳು ಒಂದೇ ಮಾದರಿಯವಾಗಿ, ಸಾದಾ ಇದ್ದು ಕಲೆಗೆ ಸಾಕಷ್ಟು ಆಸ್ಪದ ಕೊಟ್ಟಿಲ್ಲ.

ಹಿಂದಕ್ಕೊಮ್ಮೆ ಕಲಾಪ್ರಪೂರ್ಣವಾಗಿ ಸ್ವಚ್ಛಂದ ರೀತಿಯಲ್ಲಿ ಬೆಳೆದಿದ್ದ ಭಾರತೀಯ ಕಲೆಯನ್ನು ಈಗ ಪುನರುಜ್ಜೀವನಗೊಳಿಸುವುದು ಅವಶ್ಯವಾಗಿದೆ. ಆ ಕಲೆಯನ್ನನುಸರಿಸಿ ಇಂದಿನ ಕಟ್ಟಡಗಳನ್ನು ಕಟ್ಟುವುದರಿಂದ ನಮ್ಮ ಸಾಂಸ್ಕೃತಿಕ ಸಂಪತ್ತನ್ನು ಕಾಯ್ದುಕೊಂಡಂತಾಗುವುದು.

## ವಿಗ್ರಹಗಳು

ಸಂಸ್ಥೆಯ ಡಾಯರೆಕ್ಟರರು ಮತ್ತು ಅವರ ಸಹಾಯಕ ಅಧಿಕಾರಿವರ್ಗದವರು ಪ್ರತಿವರ್ಷ ಕೈಕೊಳ್ಳುತ್ತಿರುವ ಪ್ರವಾಸಗಳಿಂದ ಸಂಸ್ಥೆಗೆ ಅನೇಕ ಮಹತ್ವದ ಕಲ್ಲು ಮತ್ತು ಧಾತುಮಯ ವಿಗ್ರಹಗಳು ದೊರೆತಿವೆ. ಅವನ್ನು ಬೌದ್ಧ, ಹಿಂದು, ಜೈನ ಧರ್ಮಗಳಿಗೆ ಸಂಬಂಧಿಸಿದವೆಂದು ವಿಭಾಗಿಸಬಹುದು. ಈ ರೀತಿ ಸಂಗ್ರಹಿಸಿದ ವಸ್ತುಗಳಲ್ಲಿ ಕೆಲವು ಅತ್ಯಂತ ಅಪರೂಪವಾಗಿವೆ. ಹಿಂದೂ ಮತ್ತು ಜೈನ ವಿಗ್ರಹಗಳು ಕರ್ನಾಟಕ ಮೂರ್ತಿಶಿಲ್ಪಕಲೆಯ ಅತ್ಯುತ್ತಮ ಮಾದರಿಗಳಾಗಿದ್ದು ಪೂರ್ಣ ವೈವಿಧ್ಯದಿಂದ ತುಂಬಿವೆ. ಕಲೆಹಾಕಿದ ಮಹತ್ವದ ಮೂರ್ತಿಗಳಲ್ಲಿ ರಾವಣ, ದತ್ತಾತ್ರೇಯ, ನಟರಾಜ, ಮಹಿಷಾಸುರ ಮರ್ದಿನಿ ಮುಂತಾದವುಗಳನ್ನು ಉಲ್ಲೇಖಿಸದೆ ಇರಲಾರೆವು. ಪಾಡುವಳ್ಳಿಯಿಂದ ತಂದ ಜೈನ ಮೂರ್ತಿಗಳು ಕ್ರಿ. ಶ. ೧೫–೧೬ನೆಯ ಶತಮಾನದಲ್ಲಿ ಕಂಚಿನ ಮೂರ್ತಿಗಳನ್ನು ನಿರ್ಮಿಸುವ ಕಲೆಯು ಕರ್ನಾಟಕದಲ್ಲಿ ಯಾವ ಪರಾಕಾಷ್ಠೆಯನ್ನು ಮುಟ್ಟಿತ್ತೆಂದು ಚನ್ನಾಗಿ ನಿದರ್ಶಿಸುತ್ತವೆ. ಇವುಗಳಲ್ಲಿ ತೀರ್ಥಂಕರರ ವಿಗ್ರಹಗಳು, ಕೂಷ್ಮಾಂಡಿನಿ, ಪದ್ಮಾವತಿ, ನಂದೀಶ್ವರವರದ್ವೀಪ, ಲೋಕಪಾಲಬ್ರಹ್ಮದೇವ ಮೊದಲಾದ ಮೂರ್ತಿಗಳು ಜೈನಕಲೆಯ ಉತ್ತಮ ಪ್ರತೀಕಗಳಾಗಿವೆ. ಕಲ್ಲಿನ ಮೂರ್ತಿಗಳಲ್ಲಿ ಪಟ್ಟದಕಲ್ಲಿನಿಂದ ತಂದ ನಟರಾಜನ ವಿಗ್ರಹವು ಬಹುಸುಂದರವಿದೆ. ಇದನ್ನು ತಯಾರಿಸಿದ ರೀತಿಯ ಮೇಲಿಂದ ಮತ್ತು ಅದು ದೊರೆತ ಸ್ಥಾನಮಾನಗಳ ಮೇಲಿಂದ ಇದು ಬದಾಮಿ ಚಾಲುಕ್ಯರ ಕಾಲಕ್ಕೆ ಅಂದರೆ ಸುಮಾರು ಕ್ರಿ. ಶ. ೮ ನೆಯ ಶತಮಾನದಲ್ಲಿ ತಯಾರಿಸಲ್ಪಟ್ಟಿರಬೇಕೆಂದು ನಿರ್ವಿವಾದವಾಗಿ ಹೇಳಬಹುದು.

ಒಂಟಿ (camel) ವಾಹನವುಳ್ಳ ದುರ್ಗಾ ಮತ್ತು ಸುಪಾರ್ಶ್ವ, ಪಾರ್ಶ್ವ ನಾಥರ ವಿಗ್ರಹಗಳು ಉತ್ಕೃಷ್ಟ ಕಲೆಯ ನಿದರ್ಶನಗಳಾಗಿವೆ.

ಇತ್ತೀಚೆಗೆ ಬೆಳಗಲಿಯ (ಮುಧೋಳ ತಾಲೂಕು) ೧೧-೧೨ ನೆಯ ಶತಕದ ಸೌದತ್ತಿಯ ರಟ್ಟರ ಕಾಲದ ಎರಡು ದ್ವಾರಪಾಲಕರ ಮೂರ್ತಿಗಳು ಮುಧೋಳದ ರಾಣೀಸಾಹೇಬರಿಂದ ಸಂಸ್ಥೆಗೆ ಉಚಿತವಾಗಿ ದೊರೆತಿವೆ. ಅವುಗಳಲ್ಲಿ ಕಲ್ಲಿನ ಕುಸುರಿನ ಕೆಲಸವು ಪ್ರೇಕ್ಷಣೀಯವಾಗಿದೆ. ಅದರಂತೆ ಹಾನಗಲ್ಲು ತಾಲೂಕಿನ ಬೆಳ ವತ್ತಿಯಲ್ಲಿದ್ದ ಹೊಯ್ಸಳ ಶಿಲ್ಪಕಲೆಯ ಮಾದರಿಯಲ್ಲಿ ಕಟೆದ ಉತ್ಕೃಷ್ಟ ಮುರಲೀ ಧರನ ವಿಗ್ರಹವೂ ಈ ಸಂಸ್ಥೆಯ ಕಲಾಕೃತಿಗಳ ಸಂಗ್ರಹದಲ್ಲಿ ವರ್ಣಿಸಲ್ಪಡಲು ಯೋಗ್ಯವಾಗಿದೆ.

## ವಸ್ತುಸಂಗ್ರಹಾಲಯ

ಸಂಶೋಧನದ ಸಾಧನ ಸಾಮುಗ್ರಿಗಳನ್ನು ಪ್ರತಿವರ್ಷ ಕಲೆಹಾಕುವಾಗ ಎಷ್ಟೋ ಕನ್ನಡ ಸಾಂಸ್ಕೃತಿಕ ವಸ್ತುಗಳನ್ನು ಸಂಸ್ಥೆಯು ಸಂಗ್ರಹಿಸಿದೆ. ಅವುಗಳಲ್ಲಿ ಸಾಹಿತ್ಯಕ ಮತ್ತು ಐತಿಹಾಸಿಕ ಮಹತ್ವವುಳ್ಳ ಕೆಲವು ವಸ್ತುಗಳನ್ನು ಆರಿಸಿ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇಟ್ಟಿದೆ. ಈ ರೀತಿಯಿಂದ ತಯಾರಿಸಲಾದ ವಸ್ತುಸಂಗ್ರಹಾಲಯವು ವಿದ್ವಾಂಸರಿಗೆ ಹೆಚ್ಚಿನ ಅಭ್ಯಾಸಕ್ಕೆ ಅನುಕೂಲತೆಯನ್ನೊದ- ಗಿಸಿ ಕೊಡುವುದಲ್ಲದೆ ಸಾಮಾನ್ಯರಿಗೂ ಬೋಧಪ್ರದವಾಗಿದೆ. ಮುಂಬೈ ಕರ್ನಾಟಕ ದಲ್ಲಿ ಈ ತೆರನಾದ ವಸ್ತುಸಂಗ್ರಹಾಲಯವು ಬೇರೊಂದಿಲ್ಲ. ವಿಜಾಪುರದಲ್ಲಿದ್ದ ವಸ್ತುಸಂಗ್ರಹಾಲಯದಲ್ಲಿ ಉಳಿದ ಕಾಲದ ಕೆಲವು ಕಲಾಕೃತಿಗಳನ್ನು ಮತ್ತು ಐತಿಹಾಸಿಕ ವಸ್ತುಗಳನ್ನು ಇಟ್ಟಿದ್ದರೂ, ಅದು ಆದಿಲಶಾಹಿಕಾಲದ ವಸ್ತುಗಳನ್ನು ಪ್ರದರ್ಶಿಸಲು ಮೀಸಲಿಟ್ಟದ್ದಾಗಿದೆ. ಆ ವಸ್ತುಸಂಗ್ರಹಾಲಯದ ಧ್ಯೇಯ ಧೋರಣೆಗಳು ಬೇರೆಯಾದುದರಿಂದ ಈ ಕನ್ನಡ ಸಂಶೋಧನ ಸಂಸ್ಥೆಯಲ್ಲಿದ್ದ ವಸ್ತುಸಂಗ್ರಹಾಲಯವು ಅನನ್ಯವಾದುದೆಂದು ಹೇಳಬಹುದು.

ವಸ್ತುಸಂಗ್ರಹಾಲಯವನ್ನು ಈ ಕೆಳಗಿನಂತೆ ವಿಭಾಗಿಸಿದೆ:—

(೧) ಪುರಾಣವಸ್ತುಗಳು– ಪ್ರಾಗೈತಿಹಾಸಿಕ ಮತ್ತು ಐತಿಹಾಸಿಕ.
(೨) ಶಿಲಾಶಾಸನ ಮತ್ತು ತಾಮ್ರಶಾಸನಗಳು.
(೩) ಕಲ್ಲು, ಕಟ್ಟಿಗೆ ಮತ್ತು ಕಂಚಿನ ಮೂರ್ತಿಗಳು.
(೪) ವಾಸ್ತುಶಿಲ್ಪ, ವರ್ಣಚಿತ್ರ ಇತ್ಯಾದಿ ಕಲೆಗಳು.

ಚಿತ್ರ ೫



ಪಟ್ಟಕದಲ್ಲಿನ ನಟರಾಜನ ಶಿಲಾಮೂರ್ತಿ.

( ೮ ನೆಯ ಶತಮಾನ )

ಈಗ ಇದು ಕನ್ನಡ ರಿಸರ್ಚ ಇನ್ಸ್ಟಿಟ್ಯೂಟಿನಲ್ಲಿದೆ. (ಪುಟ ೧೧)

(೫) ಕನ್ನಡ ಅಕ್ಷರಗಳ ಬೆಳವಣಿಗೆಯನ್ನು ತೋರಿಸುವ ಶಾಸನಗಳು. (Palaeographic gallery)

(೬) ನಾಣ್ಯಗಳು.

(೭) ಹಸ್ತಲಿಖಿತ ಗ್ರಂಥಾಲಯ.

(೮) ಐತಿಹಾಸಿಕ ಕಾಗದ ಪತ್ರಗಳು.

ಈ ಮೇಲಿನ ಪ್ರತಿಯೊಂದು ವಿಭಾಗವನ್ನು ಬೇರೆ ಬೇರೆಯಾದ ಕೋಣೆಗಳಲ್ಲಿ ಪ್ರದರ್ಶಿಸಿದೆ. ಪ್ರೇಕ್ಷಕರ ಮನಹಿಡಿಯುವಂತೆ ವಿಷಯ ಸೂಚಕ ಟಿಪ್ಪಣಿಗಳನ್ನೂ ಆ ಆ ವಿಭಾಗದಲ್ಲಿ ಇಟ್ಟಿದೆ.

ಇತಿಹಾಸ ಮತ್ತು ಸಾಹಿತ್ಯ ಈ ವಿಷಯಗಳಿಗೆ ಸಂಬಂಧಿಸಿದ ನಕ್ಷೆಗಳನ್ನು ಪ್ರದರ್ಶಿಸಿದೆ.

ಸಂಸ್ಥೆಯ ಕಾರ್ಯಕಲಾಪಗಳನ್ನೂ ಮತ್ತು ಅದು ಸಾಧಿಸಿದ ಕೆಲಸದ ಸ್ಥೂಲಪರಿಚಯವನ್ನೂ ಮಾಡಿಕೊಡುವಾಗ್ಗೆ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶಿಸಲ್ಪಟ್ಟ ಕೆಲವು ವಸ್ತುಗಳ ವಿಷಯಕ್ಕೆ ಈ ಮೊದಲೆ ಹೇಳಿದೆಯಾದರೂ ಅವುಗಳ ಪರಿಚಯ ಇನ್ನಷ್ಟು ವಿವರವಾಗಿ ಮತ್ತು ಉಳಿದ ವಸ್ತುಗಳ ಮಾಹಿತಿ ಮಾಡಿಕೊಡಬಯಸುತ್ತೇವೆ. ಹೀಗೆ ಮಾಡುವದು ಪುನರುಕ್ತಿಯೆಂದು ತೋರಿದರೂ ಹೆಚ್ಚು ಪ್ರಯೋಜನಕಾರಿಯೆಂದೆನಿಸುವುದರಿಂದ ಮಾಡಬೇಕಾಗಿದೆ.

(೧) **ಪುರಾಣವಸ್ತುವಿಭಾಗ:—** ಈ ವಿಭಾಗದಲ್ಲಿ ಮುಖ್ಯವಾಗಿ ಎರಡು ಭಾಗಗಳನ್ನು ಮಾಡಬಹುದು. ಒಂದು ಕರ್ನಾಟಕೇತರ ಅಂದರೆ ಮೊಹೆಂಜೊದಾರೋದಿಂದ ಬಂದ ಪುರಾತನ ಅವಶೇಷಗಳ ವಿಭಾಗ ಮತ್ತೊಂದು ಕೇವಲ ಮುಂಬೈಕರ್ನಾಟಕದಲ್ಲಿಯೆ ದೊರೆತ ಪುರಾಣವಸ್ತುಗಳ ವಿಭಾಗ.

ಮೊಹೆಂಜೋದಾರೋದ ಸುಮಾರು ೪೦೦ರಷ್ಟು ವಸ್ತುಗಳನ್ನು ಭಾರತ ಪುರಾಣಶೋಧನ ಇಲಾಖೆಯ ಡಾಯರೆಕ್ಟರ–ಜನರಲ್ಲರು ಸಂಸ್ಥೆಗೆ ಕೊಟ್ಟಿದ್ದಾರೆ. ಅವು ಸುಟ್ಟ ಮಣ್ಣು, ಶಂಖ, ತಾಮ್ರ ಮುಂತಾದವುಗಳಿಂದ ತಯಾರಾಗಿವೆ. ಈ ವಸ್ತುಗಳಲ್ಲಿ ಮಾತೃದೇವತೆಯ ವಿಗ್ರಹಗಳು, ಗಂಡಕ, ಕೋಣ, ಹೋರಿ, ಗಿಳಿ ಮುಂತಾದ ಪಶುಪಕ್ಷಿಗಳ ಗೊಂಬೆಗಳು, ಲೋಟಾ, ಗಿಂಡಿ, ಚಕ್ಕಡಿ, ಬಳಿ, ಗುಳಗುಳಿ, ಪ್ಯಾದೆ ಮುಂತಾದ ಆಟದ ಸಾಮಾನುಗಳು, ಗೃಹಕೃತ್ಯಕ್ಕೆ ಉಪಯುಕ್ತವಾದ ಸೂಜಿ, ಚಾಕು ಮೊದಲಾದ ಸಾಮಾನುಗಳು, ಆಭರಣದ ಮಣಿಗಳು, ಇಟ್ಟಂಗಿ ಮೊದಲಾದ ಕಟ್ಟಡದ ವಸ್ತುಗಳೂ ಇವೆ. ಗಂಡಕ, ಆನೆ, ಹೋರಿ, ಚಿಗರಿ, ಹುಲಿ, ಒಂದು ಕೋಡುಳ್ಳ ಪ್ರಾಣಿ ಮುಂತಾದ ಪಶುಗಳ ಚಿತ್ರದಿಂದೊಡಗೂಡಿದ ಮುದ್ರೆಗಳ ನಕಲುಗಳು, ತೂಕದ ಕಲ್ಲುಗಳು ಮತ್ತು ಕಲ್ಲಿನ ಅಲ್ಪಾಯುಧಗಳೂ ಈ ವಿಭಾಗದಲ್ಲಿ ಕಂಡುಬರುವವು. ಇಲ್ಲಿ ಇಟ್ಟ ಅತಿದೊಡ್ಡ ಇಟ್ಟಂಗಿಯ ಅಳತೆ ೧೪" ಉದ್ದ, ೬⅔" ಅಗಲ, ೩⅔" ದಪ್ಪ. ಮಡಿಕೆಯ ಚೂರುಗಳ ಮೇಲಿರುವ

ಚಿತ್ರ ವಿಚಿತ್ರ ಬಣ್ಣದ ರೇಖೆಗಳು ಆಗಿನಕಾಲಕ್ಕೆ ಮಣ್ಣಿನ ಪಾತ್ರೆಗಳನ್ನು ಹೇಗೆ ಅಲಂಕರಿಸುತ್ತಿದ್ದರೆಂದು ತಿಳಿಸುವವು. ಮುದ್ರೆಗಳ ಮೇಲಿರುವ ಅಕ್ಷರಗಳನ್ನು ಈವರೆಗೂ ಯಾರೂ ನಿರ್ಣಾಯಕವಾಗಿ ಓದಿಲ್ಲ. ವಿದ್ವಾಂಸರಲ್ಲಿ ಅವುಗಳ ಬಗ್ಗೆ ಭಿನ್ನಾಭಿಪ್ರಾಯವಿದೆ. ಇವಿಷ್ಟೇ ಅವಶೇಷಗಳನ್ನು ನೋಡಿದರೂ ಸಹ ಮೊಹೆಂಜೋ ದಾರೋದ ಸಂಸ್ಕೃತಿಯು ಯಾವ ಮಟ್ಟಕ್ಕೇರಿತ್ತೆಂಬುದನ್ನು ಊಹಿಸಲು ಬರುವದು.

ಈ ಅವಶೇಷಗಳ ಕಾಲ ಸು. ಕ್ರಿ. ಪೂ. ೨೨೫೦. ಮುಂಬೈಕರ್ನಾಟಕದಲ್ಲಿ ಇಂಥ ಅವಶೇಷಗಳಿದ್ದ ವಸ್ತುಸಂಗ್ರಹಾಲಯ ಇದೊಂದೇ.

ಮುಂಬೈಕರ್ನಾಟಕದಲ್ಲಿ ಅತಿಪ್ರಾಚೀನಕಾಲದ ಅಂದರೆ ಪೂರ್ವ ಶಿಲಾ-ಯುಗದ ಅವಶೇಷಗಳು ಘಲಪ್ರಭಾನದಿಯ ಕೊಳ್ಳದಲ್ಲಿ ಬದಾಮಿ ಮತ್ತು ರೋಣ ತಾಲೂಕಿನ ಖ್ಯಾಡ, ಮಣ್ಣೇರಿ, ಥಾಣಕಶಿರೂರು ಮುಂತಾದ ಊರುಗಳ ಹತ್ತರ ಮತ್ತು ಅದೇ ನದಿಗೆ ಕೂಡುವ ಬೆಣ್ಣೀಹಳ್ಳ, ಸಾಸಿವೆಹಳ್ಳ, ಹಿರೇಹಳ್ಳಗಳ ಪಾತ್ರೆ ಗಳಲ್ಲಿಯೂ ದೊರೆತಿವೆ. ಇವುಗಳನ್ನು ಆಗಿನಕಾಲದ ಮನುಷ್ಯನು ತನ್ನ ಆತ್ಮ ಸಂರಕ್ಷಣೆಗೆ ಮತ್ತು ಆಹಾರ ದೊರಕಿಸುವದರಸಲುವಾಗಿ ತಯಾರಿಸಿಕೊಂಡಿದ್ದನು. ಈ ಆಯುಧಗಳ ಕಾಲನಿರ್ಣಯ ಇನ್ನೂ ನಿಶ್ಚಿತವಾಗಿರದಿದ್ದರೂ ಅವು ಕ್ರಿ. ಪೂ. ೫೦,೦೦೦ ವರ್ಷಗಳ ಹಿಂದಿನವೆಂದು ಗ್ರಹಿಸಬಹುದು. ಇದೇ ರೀತಿಯಿಂದ ತಯಾರಾದ ಕೃತ್ರಿಮ ಕಲ್ಲಿನ ಆಯುಧಗಳು ಮದ್ರಾಸಪ್ರಾಂತದಲ್ಲಿಯೂ ಸಿಕ್ಕಿವೆ. ಈ ಆಯುಧಗಳನ್ನು ಎರಡೂ ಮಗ್ಗಲಲ್ಲಿ ಕಲ್ಲಿನಿಂದ ಹೊಡೆದು ಮಾಡಿದೆ. ಇವುಗಳನ್ನು ಎಸೆಯುವದಕ್ಕೂ, ಗಡ್ಡೆಗೆಣಸುಗಳನ್ನು ಅಗೆಯುವದಕ್ಕೂ, ಗೀಚ ಲಿಕ್ಕೂ ಉಪಯೋಗಿಸುತ್ತಿದ್ದರು. ಈ ಶಿಲಾಯುಧಗಳ ನಂತರ ಬಂದ ನೂತನ ಶಿಲಾಯುಧಗಳು ಅಥಣಿ ತಾಲೂಕಿನಲ್ಲಿಯ ಸಪ್ತಸಾಗರ, ಹಿರೇಕೆರೂರ ತಾಲೂಕಿನ ಸಿರಗಂಬಿ ಮುಂತಾದ ಊರುಗಳಲ್ಲಿ ಸಿಕ್ಕಿವೆ. ಇಂಥ ಅವಶೇಷಗಳು ಮೈಸೂರು ಸಂಸ್ಥಾನದ ಬ್ರಹ್ಮಗಿರಿಯಲ್ಲಿಯೂ ಮತ್ತು ಬಳ್ಳಾರಿ ಜಿಲ್ಹೆಯ ಸಂಗನಕಲ್ಲು ಮೊದಲಾದ ಊರುಗಳ ಬಳಿಯಲ್ಲಿಯೂ ಸಿಕ್ಕಿವೆ. ಸಪ್ತಸಾಗರದಲ್ಲಿ ಅಲ್ಪ ಶಿಲಾಯುಧಗಳೂ (Microliths) ಕೆಲವು ಸಿಕ್ಕಿವೆ.

ಕೆಲವು ಪುರಾಣವಾಸಸ್ಥಳಗಳನ್ನು ಸಂಸ್ಥೆಯು ಕಂಡುಹಿಡಿದಿದೆಯೆಂದು ಹೇಳಿದೆಯಲ್ಲವೆ ? ಅವುಗಳಲ್ಲಿ ಘಟಪ್ರಭಾದಂಡೆಯ ಮೇಲಿದ್ದ ಹೆರಕಲ್ಲು, ಬೆಳಗಾವ ಬಳಿಯಲ್ಲಿಯ ವಡಗಾವ-ಮಾಧವಪೂರ, ತುಂಗಭದ್ರಾನದಿಯ ಇಟಗಿ, ಹಿರೇಕೆರೂರ ತಾಲೂಕಿನ ಸಿರಗಂಬಿ, ಭೈರವನಪಾದ, ನಾಗವಂಡ ಮುಂತಾದ ಊರುಗಳ ಅವ ಶೇಷಗಳು ಸು. ೨೦೦೦ ವರ್ಷಗಳ ಹಿಂದಿನವಿದ್ದು ಮಹತ್ವದವಾಗಿವೆ. ಹೆರಕಲ್ಲು, ಭೈರ ವನಪಾದ, ವಡಗಾವ ಈ ಊರುಗಳ ಹಂಚಿನ ಚೂರುಗಳ ಮೇಲೆ ಬಣ್ಣದ ರೇಖಾ ಚಿತ್ರಗಳನ್ನು ಎಳೆದಿದೆ. ಈ ಚೂರುಗಳಿಗೆ ಕಪ್ಪುಬಣ್ಣದ ಹೊಳಪಿನ ಲೇಪಕೊಟ್ಟಿದೆ. ಹಂಚಿನ ಅವಶೇಷಗಳ ಜೊತೆಗೆ ಸಣ್ಣ ಗೊಂಬೆಗಳು, ಶಂಖದ ಬಳೆಚೂರುಗಳು,

ಚಿತ್ರ



ಪಟ್ಟದಕಲು:- ವಿರೂಪಾಕ್ಷ ದೇವಸ್ಥಾನದಲ್ಲಿ ಕಲ್ಲಿನಸಲ್ಲಿ ಕೆತ್ತಿದ ಅಡವಿಯಲ್ಲಿಯ ಒಂದು ಆಶ್ರಮದ ದೃಶ್ಯ.
(ಪುಟ ೧೩)

ಮಣಿಗಳೂ ಸಹ ಸಿಕ್ಕಿವೆ. ಬಾಗೇವಾಡಿ ತಾಲೂಕಿನಲ್ಲಿ ಕೃಷ್ಣಾನದಿಯ ದಂಡೆಗುಂಟ ಹಳೆಯ ಸ್ಥಳಗಳ ಒಂದು ಸಾಲೇ ಸಿಕ್ಕಿದೆ. ಈ ಎಲ್ಲ ಊರಿನ ಅವಶೇಷಗಳನ್ನು ಈ ವಿಭಾಗದಲ್ಲಿ ಪ್ರದರ್ಶಿಸಿದೆ. ಹೆರಕಲ್ಲಿನಲ್ಲಿ ಸಿಕ್ಕ ಆನೆಯ ಮುಖ, ಇಟಗಿಯ ಉಖಾ ಪಾತ್ರೆ, ವಡಗಾವಿಯ ಕಬ್ಬಿಣದ ಕಠಾರಿ ಹೇಳತಕ್ಕಂಥವುಗಳು.

(೨) **ಶಾಸನಗಳು:—** ಈ ವಿಭಾಗದಲ್ಲಿ ಪ್ರದರ್ಶನಕ್ಕಿಟ್ಟ ವಡಗಾವ ಮತ್ತು ಬದಾಮಿ ಶಿಲಾಲಿಪಿಗಳ ಮಹತ್ವವನ್ನು ಕುರಿತು ಈಗಾಗಲೆ ಹೇಳಿದೆ. ಪೂಗವ-ರ್ಮನ ಮುಧೋಳ ತಾಮ್ರಶಾಸನವು ಕ್ರಿ. ಶ. ೬ ನೆಯ ಶತಮಾನದ್ದಿರುವುದು. ಅಗ್ನಿಷ್ಟೋಮ, ಅಗ್ನಿಚಯನ, ವಾಜಪೇಯ, ಹಿರಣ್ಯಗರ್ಭ ಎಂಬ ಯಾಗಗಳನ್ನು ಮಾಡಿ ಪುನೀತನಾದ **ರಣಾಷ್ಟೋತ್ತರ** ಎಂಬ ಅಪರನಾಮವುಳ್ಳ ಪೂಗವರ್ಮ ರಾಜನು ಮಳಕೋಟಕ (ಮಳಕೇಟ) ದಲ್ಲಿ ವರಾಹದೇವಸ್ವಾಮಿಗೆ ಪುಣ್ಯಪ್ರಾಪ್ತಿಗಾಗಿ ದಾನಕೊಟ್ಟಿದ್ದಾನೆ. ಚಾಲುಕ್ಯವಂಶದಲ್ಲಿ ಪೂಗವರ್ಮನೆಂಬ ರಾಜನು ಹೊಸಬ. ಇವನು ೧ ನೆಯ ಕೀರ್ತಿವರ್ಮನೆಂದು ತೋರುವದು. ಕದಂಬ ಮೂರನೆಯ ಜಯಕೇಶಿಯ ೧೩ ನೆಯ ವರ್ಷದ ತಾಮ್ರಶಾಸನವು ಕಾಂಚಿಯ ಹತ್ತರಿದ್ದ ಉತ್ತರ ನೆಲ್ಲೂರಿನಿಂದ ಬಂದ ದ್ರಾವಿಡ ವಸುದೇವ ಭಟ್ಟೋಪಾಧ್ಯಾಯನ ಬಿನ್ನಹದ ಮೇರೆಗೆ ಅರಸನು ವರಾಹಮೂರ್ತಿಯನ್ನು ಪ್ರತಿಷ್ಠಾಪಿಸಿ ದೇವಕಾರ್ಯಕ್ಕೆ ಮಲವರ ಮಾಲಿ ನಿಷ್ಕ, ಲೊಕ್ಕಿನಿಷ್ಕ ಮುಂತಾದ ಬಂಗಾರದ ನಾಣ್ಯಗಳನ್ನು ದಾನಕೊಟ್ಟನು. ಈ ಶಾಸನದಲ್ಲಿ ಬಂದ ವರ್ಣನೆಯಿಂದ ಗುಡಿಗಳಲ್ಲಿ ದೇವತಾರ್ಚನೆ ಹೇಗೆ ನಡೆಯುತ್ತಿತ್ತೆಂದು ಗೊತ್ತಾಗುವದು. ಆಗಿನಕಾಲದ ಸಾಮಾಜಿಕ ಜೀವನವನ್ನು ಈ ಶಾಸನ-ದಿಂದ ತಿಳಿದುಕೊಳ್ಳಬಹುದು.

(೧) **ಮೂರ್ತಿಗಳು:—** ಹಸರು ಮೂಡಿ ಕಲ್ಲಿನಲ್ಲಿ ತಯಾರಿಸಿದ ತೀರ್ಥಂ-ಕರರ ಲಕ್ಕುಂಡಿಯ ಎರಡು ಮೂರ್ತಿಗಳು, ಅಮ್ಮಿನಭಾವಿಯಿಂದ ತಂದ ಪಾರ್ಶ್ವ-ನಾಥನ ಕಲ್ಲಿನ ಸುಂದರ ವಿಗ್ರಹ ಮತ್ತು ಹಾಡುವಳ್ಳಿಯ ಜೈನ ಪದ್ಮಾವತಿ, ಕೂಷ್ಮಾಂಡಿನಿ ಮತ್ತು ತೀರ್ಥಂಕರರ ಮೂರ್ತಿಗಳು ಕರ್ನಾಟಕ ಜೈನ ಮೂರ್ತಿ ಶಿಲ್ಪದ ಅತ್ಯುತ್ತಮ ಉದಾಹರಣೆಗಳಾಗಿವೆ. ಅದೇರೀತಿಯಾಗಿ ಉಮಾಸಹಿತ ಚಂದ್ರಶೇಖರಮೂರ್ತಿ, ೧೦ ತಲೆ ೨೦ ಕೈಯುಳ್ಳ ರಾವಣನ ಮೂರ್ತಿ, ದತ್ತಾತ್ರೇಯ, ಬೆಣ್ಣೇಕೃಷ್ಣ, ಶ್ರೀದೇವಿ, ಭೂದೇವಿಗಳಿಂದೊಡಗೂಡಿದ ವಿಠ್ಠಲ ಮುಂತಾದ ದೇವತಾವಿಗ್ರಹಗಳು ಉತ್ಕೃಷ್ಟವಾದ ವೈದಿಕ ಮೂರ್ತಿಗಳಾಗಿವೆ. ಬಾಳೂರಿನ ಸರಸ್ವತಿಯ ಮೂರ್ತಿ ಮತ್ತು ಬೆಳವತ್ತಿಯ ಗೋಪಾಲಕೃಷ್ಣನ ಶಿಲಾಪ್ರತಿಮೆಗಳು ಒಂದೊಂದರಲ್ಲಿ ಮಹಿಮೆವೆತ್ತಿವೆ.

(೪) **ಕಲಾವಿಭಾಗ:—** ಪಟ್ಟದಕಲ್ಲು, ಐಹೊಳೆ ಮತ್ತು ಬದಾಮಿ ಈ ಊರುಗಳಲ್ಲಿಯ ಉತ್ತಮ ಶಿಲ್ಪಗಳ ರೇಖಾಚಿತ್ರಗಳನ್ನು ಈ ಭಾಗದಲ್ಲಿಟ್ಟಿದೆ. ಹಾಗೆಯೆ ಹಂಪಿಯ ಕಲಾಕೃತಿಗಳನ್ನೂ ಪ್ರದರ್ಶಿಸಿದೆ. ಈ ಚಿತ್ರಗಳು ಆ ಆ ಕಾಲದ


ಜನರ ಪುರಾಣಾಸಕ್ತಿ, ಜನ ಜೀವನ ಮುಂತಾದ ವಿಷಯಗಳನ್ನು ಹೃದಯಂಗಮವಾಗಿ ಬಿಂಬಿಸುತ್ತವೆ. ರಾಮಾಯಣ, ಭಾರತ, ಭಾಗವತ ಮುಂತಾದ ಪೌರಾಣಿಕ ಗ್ರಂಥಗಳೊಳಗಿನ ಕೆಲವು ಸನ್ನಿವೇಶ, ಕಿರಾತಾರ್ಜುನೀಯ ಯುದ್ಧ, ಋಷ್ಯಾಶ್ರಮದ ದೃಶ್ಯ, ಕೀಲೋತ್ಪಾಟೀವಾನರಕಥೆ, ಹೆಂಡದ ಗಡಂಗದ ಮುಂದಿನ ನೋಟ, ಓಕಳಿ ಆಡುವದು ಮುಂತಾದ ಚಿತ್ರಗಳು ಈ ಭಾಗದಲ್ಲಿ ಕಂಡುಬರುವವು.

ವಿಜಾಪುರದ ೨ನೆಯ ಶಿಕಂದರ ಶಹನ ಕಾಲದಲ್ಲಿದ್ದ ಶ್ಯಾಮರಾವ ಚಿಂತಾಮಣ ನಾಡಗೌಡ ಎಂಬ ಆಸ್ಥಾನ ಮಂತ್ರಿಯು ತೆಗೆದ ಚಾಂದಬೀಬಿ, ಖವಾಸಖಾನ ಮತ್ತು ಅಸಾರ ಮಹಾಲ, ತಾಸಬೌಡಿ ಮೊದಲಾದ ವಿಜಾಪುರದ ಪ್ರಸಿದ್ಧ ಕಟ್ಟಡಗಳ ವರ್ಣ-ಚಿತ್ರಗಳನ್ನು ಇಲ್ಲಿ ನೋಡಬಹುದು. ಪಟ್ಟದಕಲ್ಲಿನ ಗಜಾಸುರ ಸಂಹಾರ ಮೂರ್ತಿಯ ರೇಖಾಮಯಚಿತ್ರ, ಅಜಂತೆಯ ಚಿತ್ರದ ನಕಲುಗಳು ಮತ್ತು ಹಂಪೆಯ ವಿರೂಪಾಕ್ಷದೇವಾಲಯದಲ್ಲಿದ್ದ ವ್ಯಾಸತೀರ್ಥ (ಅಥವಾ ವಿದ್ಯಾರಣ್ಯರ) ಮೆರವಣಿಗೆಯ ದೃಶ್ಯದ ಬಣ್ಣದ ಚಿತ್ರದ ನಕಲು ಬಹು ಸುಂದರವಾಗಿವೆ.

ಕರ್ನಾಟಕ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳನ್ನು ತೋರಿಸುವ ಛಾಯಾ ಚಿತ್ರಗಳನ್ನೂ ಸಹ ಈ ವಿಭಾಗದಲ್ಲಿ ಪ್ರದರ್ಶಿಸಿದೆ. •

(ಗ) **ಕನ್ನಡ ಅಕ್ಷರಗಳ ಬೆಳವಣಿಗೆಯ ವಿಭಾಗ:**– (Palaeographic gallery) ಈ ಶಾಖೆಯನ್ನು ಮೂಲ ಶಾಸನಗಲ್ಲುಗಳಿಂದಲೇ ಸಜ್ಜುಗೊಳಿಸಿದೆ. ಕನ್ನಡ ಲಿಪಿಯು ಶತ ಶತಮಾನಗಳಲ್ಲಿ ಹೇಗೆ ಅವಾಂತರ ಹೊಂದಿತೆಂದು ಈ ಶಾಸನಗಳ ಮೇಲಿನ ಅಕ್ಷರಗಳು ತಿಳಿಸಿಕೊಡುತ್ತವೆ. ಇಲ್ಲಿ ಪ್ರದರ್ಶಿಸಲಾದ ವಡಗಾವ–ಮಾಧವಪುರದ ಬ್ರಾಹ್ಮೀಶಾಸನವು ಎಲ್ಲಕ್ಕೂ ಪ್ರಾಚೀನವಾದದ್ದು. ಇದರ ಕಾಲ ಕ್ರಿ. ಪೂ. ೧ ರಿಂದ ಕ್ರಿ. ಶ. ೧ ನೆಯ ಶತಮಾನ. ಆನಂತರ ಬದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯ, ಯಾದವ, ಹೊಯ್ಸಳ, ವಿಜಯನಗರ ಮುಂತಾದ ಅರಸರ ಕಾಲದಲ್ಲಿ ಕನ್ನಡ ಅಕ್ಷರವು ಹೇಗೆ ಮಾರ್ಪಾಟು ಹೊಂದಿತೆಂದು ಗೊತ್ತಾಗುವದು. ಕಲ್ಯಾಣ ಚಾಲುಕ್ಯ, ಹೊಯ್ಸಳರ ಕಾಲದಲ್ಲಿ ಅತ್ಯಂತ ಉತ್ತಮವಾಗಿದ್ದ ಕನ್ನಡ ಅಕ್ಷರಗಳು ವಿಜಯನಗರ ಕಾಲದಲ್ಲಿ, ಕಾಗದಗಳು ವಿಶೇಷ ವ್ಯಹಾರದಲ್ಲಿ ಬಂದಂತೆ **ಕೆಡಹತ್ತಿ**ದವು. ಕ್ರಿ. ಶ. ೧೨ ನೆಯ **ಶತಮಾನ**ದ ಉತ್ತಮ ಕನ್ನಡ ಅಕ್ಷರಗಳನ್ನು ನೋಡಬೇಕಾದರೆ ಇಲ್ಲಿದ್ದ ಶಕ ೯೭೭ರ ಸಿಗ್ಗಾವಿ ಶಾಸನವನ್ನು ಮತ್ತು ರಟ್ಟ ಲಕ್ಷ್ಮೀಧರನ **ಸವದತ್ತಿ** ಶಾಸನವನ್ನು **ನೋಡಬೇಕು.**

ಈ ರೀತಿ ಮೂಲ ಶಿಲಾಶಾಸನಗಳನ್ನಿಟ್ಟುಕೊಂಡು ಅಕ್ಷರಗಳ ಬೆಳವಣಿಗೆಯನ್ನು ತೋರಿಸುವ ಈ ಸಂಸ್ಥೆಯ ಉಪಕ್ರಮವು ಭಾರತದಲ್ಲಿಯೇ ಹೊಸದು. ಈ ವಿಭಾಗದ ಜೊತೆಗೆ ಹಿಂದುಗಡೆ ತಂದ ಕೆಲವು ಮಹತ್ವದ ಶಾಸನಗಳನ್ನು ಇಟ್ಟಿದೆ. ಅವು ಗೋಗ್ರಹಣ, ನಿಸದಿ, ಸೂರ್ಯಗ್ರಹಣಕಾಲಕ್ಕೆ ಅಗ್ನಿಪ್ರವೇಶಮಾಡಿ ಸಾಯುವದು ಮುಂತಾದ ವಿಷಯಗಳಿಗೆ ಸಂಬಂಧಿಸಿವೆ. ಸತೀಕಲ್ಲುಗಳೂ ಇವೆ. ಹಾನಗಲ್ಲಿನ




ಹೊಯ್ಸಳ (ಉದಯಾದಿತ್ಯನ ಮತ್ತು ಕದಂಬ ಮನೆತನದ)
ಬಂಗಾರದ ನಾಣ್ಯಗಳು. (ಪುಟ ೭)

ವೀರಗಲ್ಲು ಮತ್ತು ಸೂರ್ಯಗ್ರಹಣಕಾಲದಲ್ಲಿ ಅಗ್ನಿಯಲ್ಲಿ ಆತ್ಮಾರ್ಪಣ ಮಾಡಿದ ಸಾಧುವಿನ ಸಂಬಂಧವಾಗಿ ಹೇಳುವ ತಿಳಿವಳ್ಳಿ ಮತ್ತು ಬಾಳೂರ ಕಲ್ಲುಗಳು ಮಹತ್ವದವಿವೆ. ತಿಳಿವಳ್ಳಿ ಶಾಸನದಲ್ಲಿ ಬರುವ

" ದ್ವಾವಿಮೌ ಪುರುಶೌ ಲೋಕೇ ಸೂರ್ಯ ಮಂಡಳ ಭೇದಿನೌ ।
ಪರಿವ್ರಾ[ಟ್] ಯೋಗಯುಕ್ತಾಶ್ಚ ರಣೇ ಚಾಭಿಮುಖೇ ಹ[ತಾಃ] " ॥

ಎಂಬ ಮಾತು ' ಯೋಗಿ ' ಜನರ ಮಾಹಾತ್ಮ್ಯವನ್ನು ವ್ಯಕ್ತಮಾಡುತ್ತದೆ.

(೬) **ನಾಣ್ಯಗಳು:—** ಈ ವಿಷಯವಾಗಿ ಸಾಕಷ್ಟು ಈ ಮೊದಲೆ ಹೇಳಿದೆ.

(೭) **ಕೈಬರೆಹದ ಗ್ರಂಥಗಳು:—** ಕರ್ನಾಟಕದಲ್ಲಿ ಕೈಬರೆಹದ ಗ್ರಂಥಗಳು ಹೇರಳವಾಗಿ ಸಿಗುತ್ತವೆ. ಅವುಗಳನ್ನು ವಿದ್ವಾಂಸರ ಮನೆತನಗಳಲ್ಲಿಯೂ, ಮಠಗಳಲ್ಲಿಯೂ ಕಾಣಬಹುದು. ಇಂಥ ಗ್ರಂಥಗಳು ಅವುಗಳನ್ನು ಓದುವವರ ಅಭಾವದ ಮೂಲಕ, ಅಷ್ಟು ಜಾಗರೂಕತೆಯಿಂದ ಕಾದಿಡಲ್ಪಡದ್ದರಿಂದ ನಾಶವಾಗುತ್ತ ನಡೆದಿವೆ. ನಮ್ಮ ಹಿಂದಿನ ಎಲ್ಲ ವಾಙ್ಮಯವು ಇಂಥ ಕೈಬರೆಹದ ಗ್ರಂಥಗಳಲ್ಲಿ ಅಡಗಿದೆ. ಅವುಗಳನ್ನು ಸಂಗ್ರಹಿಸಿ ಸುಸ್ಥಿತಿಯಲ್ಲಿ ಇಡುವ ಕೆಲಸವನ್ನು ಸಂಸ್ಥೆಯು ಪ್ರಾರಂಭದಿಂದಲೇ ಕೈಕೊಂಡಿತು. ಈಗಾಗಲೆ ಅದು ತಾಡವೋಲೆ ಮತ್ತು ಕಾಗದದ ಮೇಲೆ ಬರೆದ ಅನೇಕ ಗ್ರಂಥಗಳನ್ನು ಕಲೆಹಾಕಿ ಅಭ್ಯಾಸ ಮಾಡುತ್ತಿದೆ. ಕಲೆಹಾಕುವ ಕೆಲಸವು ಕಷ್ಟಸಾಧ್ಯ. ಏಕೆಂದರೆ ಗ್ರಂಥಗಳ ಒಡೆಯರು ಅವುಗಳನ್ನು ಕೊಡಲು ನಿರಾಕರಿಸುವರು. ತಮಗೆ ಅವು ಉಪಯುಕ್ತ ಎನಿಸದಿದ್ದರೂ ಮನೆಯಲ್ಲಿ ಅವೆ, ಇರಲಿ ಎನ್ನುವವರು ಕೆಲವರು. ಮತ್ತೆ ಕೆಲವರು ಅವು ಧರ್ಮಗ್ರಂಥಗಳೊ ಅಥವಾ ತಮ್ಮ ಮನೆತನಕ್ಕೆ ಸಂಬಂಧಿಸಿದವೊ ಎಂದು ತಿಳಿದು ಕೊಡಲಿಚ್ಛಿಸುವದಿಲ್ಲ. ಮಾರಲಿಕ್ಕೆ ಕೇಳಿದರಂತೂ ವಿಪರೀತ ಬೆಲೆ ಕೇಳುತ್ತಾರೆ. ಇಂಥ ಪ್ರಸಂಗದಲ್ಲಿ ಸಂಸ್ಥೆಯು ಜನರ ಮನವೊಲಿಸಿ ಸುಮಾರು ೧೪೦೦ ಗ್ರಂಥಗಳನ್ನು ಸಂಗ್ರಹಿಸಿದೆ. ತಾವಾಗಿಯೆ ಸಂಸ್ಥೆಗೆ ಗ್ರಂಥ ಕೊಟ್ಟ ಜನರು ಇಲ್ಲವೆಂದಲ್ಲ; ಆದರೆ ಕಡಿಮೆ. ಒಂದೇ ಗ್ರಂಥದ ಬೇರೆ ಬೇರೆ ಪ್ರತಿಗಳನ್ನು ಸಂಗ್ರಹಿಸುವದೂ ಗ್ರಂಥ ಸಂಪಾದನೆಯ ಕೆಲಸದಲ್ಲಿ ಉಪಯುಕ್ತವಾಗುತ್ತದೆ.


ಸಂಗ್ರಹಿಸಿದ ಎಲ್ಲ ಕೈಬರೆಹದ ಗ್ರಂಥಗಳನ್ನು ಪರೀಕ್ಷಿಸಿ ಕೆಳಗಿನಂತೆ ೧೨ ಭಾಗಗಳಲ್ಲಿ ವಿಂಗಡಿಸಿದೆ.—

(೧) ವ್ಯಾಕರಣ, ಛಂದಸ್ಸು, ಅಲಂಕಾರ ಇತ್ಯಾದಿ.
(೨) ನಿಘಂಟು.
(೩) ಪುರಾಣ ಮತ್ತು ಕಾವ್ಯ.
(೪) ಸ್ತೋತ್ರ ಮತ್ತು ಹಾಡುಗಳು.
(೫) ಕಥೆ ಮತ್ತು ಜೀವನವೃತ್ತಾಂತ.
(೬) ವೇದಾಂತ.

(೭) ಧರ್ಮಶಾಸ್ತ್ರ.
(೮) ವೀರಶೈವ ತತ್ವಜ್ಞಾನ (ವಚನ ಮತ್ತು ಕಾವ್ಯ).
(೯) ಲೌಕಿಕ ಶಾಸ್ತ್ರಗಳು—ಜೋತಿಷ್ಯ, ಗಣಿತ, ಕಾಮಶಾಸ್ತ್ರ, ವೈದ್ಯಕಿ, ಸಂಗೀತ, ನಾಟಕ ಇತ್ಯಾದಿ.
(೧೦) ಐತಿಹಾಸಿಕ ಕಾಗದ ಪತ್ರಗಳು.
(೧೧) ಕಡತಗಳು (ಹಳೆಯ ಲೆಕ್ಕದ ಪುಸ್ತಗಳು).
(೧೨) ಇತರ ಗ್ರಂಥಗಳು.

ಈ ಹಸ್ತಲಿಖಿತ ಗ್ರಂಥಗಳ 'ಡಿಸ್ಕ್ರಿಪ್ಟಿವ್ಹ ಕ್ಯಾಟಲಾಗ' ಎಂಬ ಗ್ರಂಥವನ್ನು ತಯಾರ ಮಾಡುತ್ತಿದ್ದು ಈಗಾಗಲೆ ೫೭ ಗ್ರಂಥಗಳ ಪರಿಚಾಯಕ ಮೊದಲನೆಯ ಸಂಪುಟವು ಅಚ್ಚಾಗಿದೆ. ಸಂಸ್ಥೆಯ ಡಾಯರೆಕ್ಟರರು 'ಕವಿಜಿಹ್ವಾ ಬಂಧನ' ಎಂಬ ಛಂದಸ್ಸಿನ ಗ್ರಂಥ, ಕುಮಾರವ್ಯಾಸ ವಿರಚಿತ 'ಐರಾವತ' ವೆಂಬ ಕಾವ್ಯ ಮತ್ತು ಕಾಮಶಾಸ್ತ್ರ ಗ್ರಂಥವಾದ 'ಮದನ ತಿಲಕ' ಇವೇ ಮೊದಲಾದ ಗ್ರಂಥಗಳನ್ನು ಪರಿಷ್ಕರಿಸಿ ಸಂಪಾದಿಸಿದ್ದಾರೆ. ಮೊದಲಿನ ಎರಡೂ ಗ್ರಂಥಗಳು ಪ್ರಸಿದ್ಧವಾಗಿವೆ. ಹಸ್ತಲಿಖಿತ ಗ್ರಂಥ ಸಂಗ್ರಹದಲ್ಲಿ ಅವಲೋಕಿಸಲ್ಪಟ್ಟ ಮಹತ್ವದ ಗ್ರಂಥಗಳೆಂದರೆ ಚಾವುಂಡರಾಯಪುರಾಣ, ಮದನತಿಲಕ, ವಿರೂಪಾಕ್ಷ ವಸಂತೋತ್ಸವ ಚಂಪೂ, ಮೋಹನ ತರಂಗಿಣಿ, ಚೆನ್ನಬಸವೇಶ್ವರ ಷಡ್ಭಕ್ತಿಕಾಲಜ್ಞಾನ, ಸಿಂಗಿರಾಜ ಪುರಾಣ, ಶಬ್ದಮಣಿದರ್ಪಣ, ಶಿವಾಧವ ಶತಕ, ಜ್ವಾಲಾಮಾಲಿನೀಕಲ್ಪಟೀಕಾ, ಕುಮಾರವ್ಯಾಸ ಭಾರತ, ನಾರಾಯಣ ಕವಿಯ ರಾಮಾಯಣ, ರಾಮಕಥಾವತಾರ (ಜೈನ ರಾಮಾಯಣ), ಕುಸ್ತಿಆಗಮ, ಮೋಳಿಗೆಯ್ಯನ ಪುರಾಣ ಮುಂತಾದವುಗಳು. ವೈದ್ಯಕಿ, ಜೋತಿಷ್ಯದ ಸಂಸ್ಕೃತ ಗ್ರಂಥಗಳೂ ಕೆಲವಿವೆ.

(೮) **ಐತಿಹಾಸಿಕ ಕಾಗದಪತ್ರಗಳು:—** ಕ್ರಿ. ಶ. ೧೫೬೫ರಲ್ಲಿ ವಿಜಯ ನಗರ ರಾಜ್ಯವು ಅಳಿದನಂತರದ ಕರ್ನಾಟಕದ ಇತಿಹಾಸವು ಸ್ಪಷ್ಟವಾಗಿ ತಿಳಿದತ್ತು ಬಂದಿಲ್ಲ. ಏಕೆಂದರೆ ಆ ಕಾಲದ ಇತಿಹಾಸವು ಮರಾಠಿ ಮತ್ತು ಪಾರ್ಶೀ ಭಾಷೆಯಲ್ಲಿದ್ದ ಕಾಗದಪತ್ರಗಳಲ್ಲಿಯೆ ಉಳಿದಿದೆ. ಇಂಥ ಪತ್ರಗಳನ್ನು ಐತಿಹಾಸಿಕ ದೃಷ್ಟಿಯಿಂದ ಪರೀಕ್ಷಿಸುವ ಮತ್ತು ಸಂರಕ್ಷಿಸುವ ಉದ್ದೇಶದಿಂದ ಅವುಗಳ ಸಂಗ್ರಹ ಕಾರ್ಯವನ್ನು ಕೈಕೊಂಡು ಸಂಸ್ಥೆಯು ಸು. ೧೦,೦೦೦ದಷ್ಟು ಕಾಗದಪತ್ರಗಳನ್ನು ದೊರಕಿಸಿದೆ. ಅವೆಲ್ಲವುಗಳನ್ನೂ ಓದಿ ಟಿಪ್ಪಣಿ ಮಾಡಿದೆ. ಅವುಗಳಲ್ಲಿ ೨೬೮೨ ಕಾಗದ ಪತ್ರಗಳ ಸಾರಾಂಶವನ್ನೂ, ೪೯೧ ಕಾಗದಪತ್ರಗಳ ಪೂರ್ತಿಪಾಠಗಳನ್ನೂ ತಯಾರಿಸಿದೆ. ಈ ಕಾಗದಪತ್ರಗಳಲ್ಲಿ ಅತಿ ಪ್ರಾಚೀನವಾದದ್ದು ಕ್ರಿ.ಶ. ೧೬೩೧ಕ್ಕೆ ಮತ್ತು ಅತಿ ಅರ್ವಾಚೀನವಾದದ್ದು, ಕ್ರಿ.ಶ. ೧೮೭೭ಕ್ಕೆ ಸೇರಿರುತ್ತವೆ. ಈ ಐತಿಹಾಸಿಕ ಪತ್ರಗಳು ಇದುವರೆಗೆ ಗೊತ್ತಾಗದಿದ್ದ ಅನೇಕ ಹೊಸ ವಿಷಯಗಳನ್ನು ಗೊತ್ತುಪಡಿಸಿಕೊಡುತ್ತವೆ.



ಕಾಯಿಕಣಿ ( ಭಟಕಳ ಪೇಠಾ )- ಮೂರು ವೀರಗಲ್ಲುಗಳು. ( ಪುಟ ೪ )

ಕರ್ನಾಟಕದ ಪ್ರಸಿದ್ಧ ದೇಸಗತಿಗಳಾದ ಕೆರೂರ, ಕೊಣ್ಣೂರ,ಹುನಗುಂದ, ಜಮಖಂಡಿ ಇತ್ಯಾದಿ ದೇಸಗತಿಗಳ ಚರಿತ್ರೆಯನ್ನು ತಿಳಿಸುವದರ ಜೊತೆಗೆ ಆಗಿನ ಕಾಲದಲ್ಲಿ ಮಹಾರಾಷ್ಟ್ರದವರಿಗೂ ಮತ್ತು ಕನ್ನಡಿಗರಿಗೂ ಯಾವ ರೀತಿಯಿಂದ ಸಂಬಂಧವಿತ್ತೆಂಬುದನ್ನು ಈ ಪತ್ರಗಳು ವಿಶದವಾಗಿ ಹೇಳುತ್ತವೆ.

## ಸಂಸ್ಥೆಯ ವಿಶೇಷ ಉಪನ್ಯಾಸಗಳು

ಸಂಸ್ಥೆಯಲ್ಲಿ ತಮ್ಮ ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಕೊಡುವ ವ್ಯಾಖ್ಯಾನಗಳನ್ನಲ್ಲದೆ ಬೇರೆ ಕೆಲವು ವ್ಯಾಖ್ಯಾನಗಳನ್ನು ಡಾಯರೆಕ್ಟರರು ಕೊಡುತ್ತಿರುತ್ತಾರೆ. ಅವುಗಳನ್ನು ಕೇಳಲು ಕನ್ನಡ ಸಂಶೋಧನೆಯಲ್ಲಿ ಆಸ್ಥೆಯಿದ್ದ ಎಲ್ಲರಿಗೂ ಆಮಂತ್ರಣ ವಿರುವದು. ಅವರು ಈಗಾಗಲೇ ಕೆಳಗಿನ ವಿಷಯಗಳ ಮೇಲೆ ಭಾಷಣ ಮಾಲೆಗಳನ್ನೇರ್ಪಡಿಸಿ ವ್ಯಾಖ್ಯಾನ ಕೊಟ್ಟಿದ್ದಾರೆ:—

(೧) ಕರ್ನಾಟಕ ಮತ್ತು ಅದು ಭಾರತಸಂಸ್ಕೃತಿಗೆ ಮಾಡಿದ ಕೊಡುಗೆ.
(೨) ಕದಂಬರ ಪೂರ್ವಕಾಲದ ಕರ್ನಾಟಕ.
(೩) ಬದಾಮಿ ಚಾಲುಕ್ಯರ (ಕ್ರಿ. ಶ. ೬–ಆನೆಯ ಶತಮಾನ) ಕಾಲದಲ್ಲಿಯ ಕಲೆ ಮತ್ತು ಸಾಮಾಜಿಕ ಜೀವನ.
(೪) ಪ್ರಾಚೀನ ಭಾರತ ಸಂಸ್ಕೃತಿಯ ಸಾಧನ ಸಾಮುಗ್ರಿಗಳು ಮತ್ತು ಅವುಗಳನ್ನು ಅಭ್ಯಸಿಸುವ ರೀತಿ.
(೫) ಬದಾಮಿ ಚಾಲುಕ್ಯರು ಮತ್ತು ಅವರ ದೇವಾಲಯುಗಳು.
(೬) ಪಟ್ಟದಕಲ್ಲು ಮತ್ತು ಅಲ್ಲಿಯ ವಿಗ್ರಹಗಳು.
(೭) ಭಟಕಳವೂ ಜೈನ ಅವಶೇಷಗಳೂ.

## ಜಾನಪದ ಸಾಹಿತ್ಯ

ಹಳ್ಳಿಯ ಜನರು ನಿತ್ಯ ಹಾಡುತ್ತಿರುವ ಜನಪದಗೀತೆಗಳನ್ನು ಅಭ್ಯಸಿಸುವದು ಅವಶ್ಯ. ಅವುಗಳ ಅಭ್ಯಾಸದಿಂದ ನಮ್ಮ ಪೂರ್ವಿಕರ ಜೀವನ, ಸಂಸ್ಕೃತಿ ಮತ್ತು ನಾಗರಿಕತೆ ಯಾವ ಪ್ರಕಾರದ್ದಿತ್ತು; ಯಾವಮಟ್ಟಕ್ಕೇರಿತ್ತೆಂಬುದು ಗೊತ್ತಾಗುವದು. ಪಟ್ಟಣಿಗರಲ್ಲಿ ಆಧುನಿಕ ಸಂಗೀತದ ಧ್ವನಿವಾಹಕ ಯಂತ್ರಸಾಮುಗ್ರಿಗಳ ಮೂಲಕ ಈ ಸಾಹಿತ್ಯ ದಿನೇ ದಿನೇ ಮಾಯವಾಗುತ್ತ ನಡೆದಿದೆ. ಹಳ್ಳಿಗಳಲ್ಲಿಯೂ ಈ ಪರಿಸ್ಥಿತಿ ಕೆಲ ವರ್ಗಗಳಲ್ಲಿ ಬರುವ ಲಕ್ಷಣವಿದೆ. ಆದುದರಿಂದ ಜನಪದ ಗೀತೆಗಳನ್ನು ಸಂಗ್ರಹಿಸುವ ಕಾರ್ಯಕ್ರಮವನ್ನು ಈ ಸಂಸ್ಥೆಯು ತನ್ನ ವಿವಿಧ ಕಾರ್ಯರಂಗದಲ್ಲಿ ಒಂದನ್ನಾಗಿ

ಮಾಡಿಕೊಂಡಿತು. ಈ ಗೀತೆಗಳಲ್ಲಿ ಸರಸ ಸುಂದರ ಕವಿತ್ವ, ಜೀವನದ ಆಳವಾದ ಅನುಭವ, ನಿರಾಡಂಬರದ ಸಾದಾ ನೀತಿ-ತತ್ವಜ್ಞಾನ, ಉತ್ಕೃಷ್ಟ ಕವಿತ್ವ ಮೊದಲಾದವುಗಳು ಅಡಗಿವೆ. ಈ ಹಾಡುಗಳನ್ನು ಸಂಸ್ಥೆಯು ತೀವ್ರ ಪ್ರಸಿದ್ಧಿಸುವ ಏರ್ಪಾಡು ಮಾಡುತ್ತಿದೆ.

## ಫೋಟೋ ಮತ್ತು ಮೂರ್ತಿಗಳ ರೇಖಾಚಿತ್ರಗಳು

ಕರ್ನಾಟಕದ ವಾಸ್ತುಶಿಲ್ಪ, ಮೂರ್ತಿಶಿಲ್ಪ ಕಲೆ ಮುಂತಾದವುಗಳನ್ನು ಅಭ್ಯಸಿಸಲು ಅನುಕೂಲವಾಗಲು ಸಂಸ್ಥೆಯು ಕರ್ನಾಟಕದಲ್ಲಿಯ ಹಳೆಯ ಗುಡಿ, ಶಿಲ್ಪ, ಬಣ್ಣದಚಿತ್ರಗಳ ಫೋಟೋ ತೆಗೆಯುವ ಮತ್ತು ರೇಖಾಚಿತ್ರಗಳನ್ನು ತಯಾರಿಸುವ ಕೆಲಸವನ್ನು ಮಾಡುತ್ತಿದೆ. ಸಂಸ್ಥೆಯ ಫೋಟೋಗ್ರಾಫರ-ಆರ್ಟಿಸ್ಟರು ಮತ್ತು ಇತರರು ತೆಗೆದ ಫೋಟೋ ಮತ್ತು ರೇಖಾಮಯ ಚಿತ್ರಗಳನ್ನು ಸಂಸ್ಥೆಯಲ್ಲಿ ಪ್ರದರ್ಶಿಸಿದೆ. ಹಿಂದುಸ್ತಾನದ ಬೇರೆ ಬೇರೆ ಭಾಗಗಳಿಂದ ವಾಸ್ತು-ಮೂರ್ತಿಶಿಲ್ಪಗಳ ಫೋಟೋಗಳನ್ನು ಸಂಗ್ರಹಿಸಿ ಹಿಂದುಸ್ತಾನದ ಕಲೆಗಳ ಅಭ್ಯಾಸಕ್ಕೆ ಸಾಕಷ್ಟು ಅನುಕೂಲತೆಗಳನ್ನು ಒದಗಿಸಿದೆ.

ಹಂಪಿ ಮುಂತಾದ ಊರುಗಳ ವರ್ಣ ಚಿತ್ರಗಳ ಬಗೆಗೆ ಈಗಾಗಲೇ ವಸ್ತು-ಸಂಗ್ರಹಾಲಯವನ್ನು ಕುರಿತು ಬರೆಯುವಾಗ ಬರೆದಿದೆ.

## ವಾರ್ಷಿಕ ಸಂಶೋಧನೋಪನ್ಯಾಸಗಳು

ಪ್ರತಿ ವರ್ಷ ಸುಪ್ರಸಿದ್ಧ ವಿದ್ವಾಂಸರಿಂದ ಸಂಶೋಧನೋಪನ್ಯಾಸ ಮಾಲೆಗಳನ್ನು ಸಂಸ್ಥೆಯು ಏರ್ಪಡಿಸುತ್ತಿದೆ. ಆಗ ವ್ಯಾಖ್ಯಾತರು ತಾವು ಆಳವಾಗಿ ಅಭ್ಯಾಸಮಾಡಿದ ಇತಿಹಾಸ, ಸಾಹಿತ್ಯ, ಸಂಸ್ಕೃತಿಗಳಿಗೆ ಸಂಬಂಧಿಸಿದ ವಿಷಯಗಳ ಮೇಲೆ ಭಾಷಣ ಮಾಡುವರು. ಈ ರೀತಿ ಭಾಷಣ ಮಾಡಿಸುವದರಿಂದ ಸಂಸ್ಥೆಯು ಜನರಿಗೆ ವಿದ್ವಾಂಸರ ಸಂಶೋಧನದ ಲಾಭವನ್ನು ಮಾಡಿ ಕೊಡುವದರೊಡನೆ ಅವರ ಕೂಡ ಸಾಕ್ಷಾತ್ ಸಂಬಂಧವನ್ನು ಬೆಳಸಿಕೊಂಡಂತಾಗುವದು. ಈಗಾಗಲೆ ಈ ಉಪನ್ಯಾಸ ಮಾಲೆಗಳಲ್ಲಿ ಆದ ಕೆಲವು ಭಾಷಣಗಳನ್ನು ಸಂಸ್ಥೆಯು ಪ್ರಸಿದ್ಧಿಸಿದೆ. ಇಲ್ಲಿಯ ವರೆಗೆ ಆದ ಎಲ್ಲ ವ್ಯಾಖ್ಯಾನಗಳನ್ನು ಅವುಗಳ ವ್ಯಾಖ್ಯಾತರ ಹೆಸರಿನೊಡನೆ ಕೆಳಗೆ ಕೊಟ್ಟಿದೆ. ಇಂಗ್ಲೀಷಿನಲ್ಲಿ ಆದ ಭಾಷಣಗಳಿಗೆ ಮಾತ್ರ ಇಂಗ್ಲೀಷಿನಲ್ಲಿ ಎಂದು ಬರೆದಿದೆ. ಉಳಿದವುಗಳು ಕನ್ನಡದಲ್ಲಿ ಆದವುಗಳು.

| ವರ್ಷ | ವ್ಯಾಖ್ಯಾತರು | ವಿಷಯ |
|---|---|---|
| ೧೯೪೦ | ರಾ. ಬ. ಸಿ. ಆರ್. ಕೃಷ್ಣಮಾಚಾರ್ಲು, ಬಿ. ಎ. | (೧) ವೈದಿಕ ಮತ್ತು ಪೌರಾಣಿಕ ಸಾಹಿತ್ಯಗಳಲ್ಲಿ ಸಂಶೋಧನೆಗಳು.<br>(೨) ಡೆಕ್ಕನ್ ಮತ್ತು ದಕ್ಷಿಣ |




ಹಾಡುವಳ್ಳಿ, ಭಟಕಳ ಪೇಠಾ, ಉತ್ತರ ಕನ್ನಡ ಜಿಲ್ಲೆ — ೭೧ ತೀರ್ಥಂಕರರ
ಪ್ರಭಾವಳಿಯುಳ್ಳ ಆದಿತೀರ್ಥಂಕರನ ಕಂಚಿನ ವಿಗ್ರಹ.
( ಈಗ ಕನ್ನಡ ರಿಸರ್ಚ ಇನ್ಸ್ಟಿಟ್ಯೂಟಿನಲ್ಲಿದೆ ) ( ಪುಟ ೧೧ )

| | | |
|---|---|---|
| | | ಭಾರತದ ಪುರಾಣವಸ್ತುಶೋಧನೆ. (೩) ಮುಂಬಯಿ ಪ್ರಾಂತದಲ್ಲಿಯ ವಾಸ್ತುಶಿಲ್ಪ (ಇಂಗ್ಲೀಷಿನಲ್ಲಿ) |
| ೧೯೪೦ | ಶ್ರೀ. ಎಮ್. ಗೋವಿಂದ ಪೈ. | (೧) ರನ್ನನ ಪರಶುರಾಮ ಚರಿತ, ಚಕ್ರೇಶ್ವರ ಚರಿತಗಳನ್ನು ಕುರಿತು. (೨) ಬಸವೇಶ್ವರನ ಕಾಲನಿರ್ಣಯ. (೩) ಕನ್ನಡಸಾಹಿತ್ಯ ಪ್ರಾಚೀನತೆ. |
| ೧೯೪೧ | ಶ್ರೀ. ಕೆ. ವ್ಹಿ. ಸುಬ್ರಹ್ಮಣ್ಯ ಅಯ್ಯರ, ಬಿ.ಎ. | (೧) ಐತಿಹಾಸಿಕ ಸಂಶೋಧನ ಪದ್ಧತಿ. (೨) ಮಳಖೇಡದ ರಾಷ್ಟ್ರಕೂಟ ಇತಿಹಾಸದಲ್ಲಿಯ ಕೆಲವು ಅಜ್ಞಾತ ವಿಷಯಗಳು (ಇಂಗ್ಲೀಷಿನಲ್ಲಿ) |
| ೧೯೪೧ | ಡಾ. ಎ. ಎನ್. ನರಸಿಂಹಯ್ಯ, ಎಂ.ಎ. ಪಿಎಚ್.ಡಿ. | ಕನ್ನಡ ಭಾಷಾಶಾಸ್ತ್ರದಲ್ಲಿಯ ಕೆಲವು ಅಭ್ಯಾಸಗಳು. (Studies in Kannada philology) |
| ೧೯೪೨ | ಶ್ರೀ. ಸಿ. ಆರ್. ಶಂಕರನ್, ಎಂ. ಎ. | ಕನ್ನಡಭಾಷಾಶಾಸ್ತ್ರದಲ್ಲಿಯ ಕೆಲವು ಸಮಸ್ಯೆಗಳು. (ಇಂಗ್ಲೀಷಿನಲ್ಲಿ) |
| ೧೯೪೩ | ಡಾ. ಎಮ್. ಎಚ್. ಕೃಷ್ಣ, ಎಂ.ಏ. ಪಿಎಚ್.ಡಿ. | (೧) ಕರ್ನಾಟಕದ ಜನತೆಯ ಪೂರ್ವಚರಿತ್ರೆ. (೨) ಕರ್ನಾಟಕದ ಕುಶಲತೆಯ ಪೂರ್ವ ಚರಿತ್ರೆ. (೩) ಚಂದ್ರವಳ್ಳಿಯ ಸಂಶೋಧನೆ. |
| ೧೯೪೩ | ಪ್ರೊ. ಡಿ. ಕೆ. ಭೀಮಸೇನರಾವ, ಎಂ. ಎ. | (೧-೨) ಶಬ್ದಮಣಿದರ್ಪಣದ ಪಾಠಾಂತರಗಳು. (೩) ಅನುಭವಾಮೃತವೂ ಹರಿಕಥಾಮೃತಸಾರವೂ. |


| | | |
|---|---|---|
| ೧೯೪೪ | ರೆವ್ಹರಂಡ ಫಾದರ ಎಚ್. ಹೆರಾಸ, ಎಸ್. ಜೆ. | (೧) ವಲಸೆ ಹೋಗೋಣ.<br>(೨) ಧಾರ್ಮಿಕ ವಿಕಾಸ.<br>(೩) ಇಂಡೋ ಮೆಡಿಟರೇನಿಯನ್ ಗೋರಿಯ ಬೆಳವಣಿಗೆ<br>(ಇಂಗ್ಲೀಷಿನಲ್ಲಿ) |
| ೧೯೪೫ | ರಾವಬಹದ್ದೂರ್ ಕೆ.ಎನ್. ದೀಕ್ಷಿತ, ಎಂ.ಎ.ಎಫ್.ಆರ್.ಎ. ಎಸ್.ಬಿ. | ಪೂರ್ವ ಶಿಲಾಯುಗದ ಕಾಲದಿಂದ ವಿಜಯನಗರದ ಕಾಲದವರೆಗಿನ ಪುರಾಣವಸ್ತು ಸಂಶೋಧನೆ.<br>(ಇಂಗ್ಲೀಷಿನಲ್ಲಿ) |
| ೧೯೪೫ | ಕಿನ್ನರಿ ವಿದ್ವಾನ್ ಹುಲಗೂರು ಕೃಷ್ಣಾಚಾರ್ಯರು. | ಕರ್ನಾಟಕ ಸಂಗೀತವೂ ದಾಸ ಕೂಟವೂ ಅರ್ಥಾತ್ ಭಾರತೀಯ ಆರ್ಯಸಂಗೀತದ ಇತಿಹಾಸವು. |
| ೧೯೪೬ | ಡಾ. ಎ. ಎನ್. ಉಪಾಧ್ಯೆ, ಎಮ್.ಎ.ಪಿಎಚ್.ಡಿ. | (೧) ಪುಷ್ಪದಂತನೂ ಅವನ ಕೃತಿಗಳೂ.<br>(೨) ವರಾಂಗಚರಿತೆ ಮತ್ತು ಜಟಾಸಿಂಹಣಂದಿ.<br>(೩) ವಡ್ಡಾರಾಧನೆಯ ಕರ್ತೃ ಮತ್ತು ಕಾಲ ವಿಚಾರ. |
| ೧೯೪೬ | ಶ್ರೀ. ಲಕ್ಷ್ಮೀನಾರಾಯಣ ರಾಯರು ಎಂ.ಎ. | ನೊಳಂಬ-ಪಲ್ಲವರು.<br>(ಇಂಗ್ಲೀಷಿನಲ್ಲಿ) |
| ೧೯೪೭ | ಶ್ರೀ. ನರಸಿಂಗರಾವ ಮಾನ್ವಿ, ಎಂ.ಎ. | ಕನ್ನಡ ಸಾಹಿತ್ಯದ ಶೈಲಿ ವಿಮರ್ಶೆ. |
| ೧೯೪೮ | ಪಂಡಿತ ಮುಳಿಯ ತಿಮ್ಮಪ್ಪಯ್ಯ | (೧) ಪುರಾತನ ಕನ್ನಡನಾಡಿನ ವ್ಯಾಪ್ತಿ.<br>(೨) ಕನ್ನಡ ದೇಶಿ ಸಾಹಿತ್ಯದ ಸ್ವರೂಪ.<br>(೩) ಬಾಜನೆಗಬ್ಬವೂ ಯಕ್ಷ ಗಾನವೂ. |

ಚಿತ್ರ ೧೦



ದೇಶಕುಲಕರ್ಣಿ ಅವರ ಇನಾಮು ಭೂಮಿಗಳಲ್ಲಿ ಕೈಹಾಕದಿರಲು ದೇಸಾಯಿಗೆ ಕೊಟ್ಟ ಮೋಡಿ ಲಿಪಿಯಲ್ಲಿದ್ದ ಒಂದು ಆಜ್ಞೆ. (ಪುಟ ೧೮)

ਚਿਤ੍ਰ ੧੦



| | | |
|---|---|---|
| ೧೯೪೯ | ಪ್ರೊ. ಎಂ. ಮರಿಯಪ್ಪಭಟ್ಟ, ಎಂ.ಎ.ಎಲ್.ಟಿ. | **ಕನ್ನಡ ಸಂಸ್ಕೃತಿ:–**<br>(೧) ದೇಶೀಯ ಶಬ್ದ ಮತ್ತು ನಾಣ್ಣುಡಿಗಳ ಬೆಳಕು<br>(೨)ಶಾಸನಗಳು ಬೀರುವ ಬೆಳಕು<br>(೩) ಸಾಹಿತ್ಯವು ಪ್ರತಿಬಿಂಬಿಸುವ ಸಂಸ್ಕೃತಿ |
| ೧೯೫೦ | ಡಾ. ಸಿ. ನಾರಾಯಣರಾವ ಎಂ. ಎ. ಪಿಎಚ್.ಡಿ. | (೧) ಜನಾಂಗ ಮತ್ತು ಭಾಷೆ.<br>(೨) ಕನ್ನಡ ಮತ್ತು ತೆಲಗು ಸಾಹಿತ್ಯಗಳು<br>(೩) ಸಾಹಿತ್ಯ ಪ್ರಭೇದಗಳು.<br>(ಇಂಗ್ಲೀಷಿನಲ್ಲಿ) |
| ೧೯೫೦ | ವಿದ್ವಾನ್ ಸೇಡಿಯಾಪು ಕೃಷ್ಣ ಭಟ್ಟ. | ಕನ್ನಡ ಅಕ್ಷರಗಳು.(ವರ್ಣಮಾಲೆ) |
| ೧೯೫೧ | ಶ್ರೀ. ಪಿ.ಬಿ. ದೇಸಾಯಿ,ಎಂ.ಎ. | (೧-೨) ಕಲಚುರಿ **ಚರಿತ್ರೆಯ** ಮೇಲೆ ಹೊಸ ಬೆಳಕು. |
| ೧೯೫೧ | ಪ್ರೊ.ಎಸ್.ಎಸ್. ಬಸವನಾಳ, ಎಂ. ಎ. | ವೀರಶೈವ ಆಂದೋಲನದ ಉಗಮ ಮತ್ತು ಬೆಳವಣಿಗೆ. |
| ೧೯೫೧ | ಪ್ರೊ. ಡಿ. ಎಲ್. ನರಸಿಂಹಾಚಾರ್ಯ, ಎಂ.ಎ. | ಕನ್ನಡ ಶಬ್ದರಚನೆ. |
| ೧೯೫೧ | ಪಂಡಿತ ಎಚ್. ಶೇಷ ಅಯ್ಯಂಗಾರ. | ಕನ್ನಡ ಸಾಹಿತ್ಯ ಸಂಶೋಧನೆಯಲ್ಲಿಯ ಕೆಲವು ಸಮಸ್ಯೆಗಳು. |
| ೧೯೫೨ | ಶ್ರೀ. ಎಮ್. ಆರ್. ಶ್ರೀನಿವಾಸಮೂರ್ತಿ, ಬಿ.ಎ. | (೧) ವೀರಶೈವ ಪುರಾಣಗಳು.<br>(೨) ಅಲ್ಲಮಪ್ರಭು.<br>(೩) ಕುಮಾರ ವಾಲ್ಮೀಕಿಯ ತೊರವೆ ರಾಮಾಯಣ. |
| ೧೯೫೨ | ಪಂಡಿತ ಮ. ಪ್ರ. ಪೂಜಾರ. | ಕನ್ನಡ ವ್ಯಾಕರಣದ ಕೆಲವು ವಿಚಾರಗಳು. |

## ಪುಸ್ತಕ ಭಾಂಡಾರ
(Research Library)

ಸಂಸ್ಥೆಯು ತನಗೆ ಸಾಧ್ಯವಾದಷ್ಟು ಅಚ್ಚಾದ ಸಂಶೋಧನ ಪುಸ್ತಕಗಳ ಭಾಂಡಾರವನ್ನು ಕಟ್ಟಿಕೊಂಡಿದೆ. ಈಗಾಗಲೇ ೫೦೦೦ ಕ್ಕೂ ಮೇಲ್ಪಟ್ಟ ಪುಸ್ತಕಗಳ ಸಂಗ್ರಹವಾಗಿದೆ. ಸಂಶೋಧನೆಗೆ ಸಂಬಂಧಿಸಿದ ೩೦ ನಿಯತ ಕಾಲಿಕಗಳು ಬರುತ್ತಿವೆ. ಇತಿಹಾಸ, ಕಲೆ, ಪುರಾಣವಸ್ತು ಸಂಶೋಧನೆ, ವಾಸ್ತುಶಿಲ್ಪ, ಮೂರ್ತಿ-ಶಿಲ್ಪ, ನಾಣ್ಯಶಾಸ್ತ್ರ, ಜನಾಂಗಶಾಸ್ತ್ರ, ಸಮಾಜಶಾಸ್ತ್ರ, ದ್ರಾವಿಡ ಭಾಷಾಶಾಸ್ತ್ರ, ಸಂಸ್ಕೃತ ಸಾಹಿತ್ಯ, ಕನ್ನಡಸಾಹಿತ್ಯಮೊದಲಾದ ವಿಷಯಗಳ ಮೇಲೆ ಈ ಗ್ರಂಥಗಳಿವೆ.

ದ್ರಾವಿಡ ಭಾಷಾಶಾಸ್ತ್ರ ಮತ್ತು ಸಮಾಜಶಾಸ್ತ್ರ ಎಂಬ ಎರಡು ಹೊಸ ವಿಷಯಗಳನ್ನು ಕಲಿಸುವ ಮತ್ತು ಸಂಶೋಧಿಸುವ ಏರ್ಪಾಡು ೧೯೪೪ರಲ್ಲಿ ಆದುದ-ರಿಂದ ಈ ವಿಷಯುಗಳಿಗೆ ಸಂಬಂಧಿಸಿದ ಗ್ರಂಥಗಳು ಸಾಕಷ್ಟು ಇರುವದಿಲ್ಲ. ಭಾಂಡಾರವು ಇನ್ನೂ ಅನೇಕ ಪುಸ್ತಕಗಳನ್ನು ಕೊಳ್ಳಬೇಕಾಗಿದೆ. ಹಣದ ಅನುಕೂಲತೆಯಾದಾಗ ಅವುಗಳನ್ನು ಕೊಳ್ಳುತ್ತ ಹೋಗುವದು. ಮುಂಬಯಿ ಕರ್ನಾಟಕದಲ್ಲಿ ಈ ರೀತಿಯ ಸಂಶೋಧನ ಸಂಸ್ಥೆ ಇದೊಂದೇ ಆದುದರಿಂದ ಅದರ ಗ್ರಂಥಾಲಯುವನ್ನು ಹೆಚ್ಚು ಪರಿಪೂರ್ಣ ಮಾಡುವದು ಅವಶ್ಯವಿದೆ.

ಭಾಂಡಾರದಲ್ಲಿಯೆ ಕುಳಿತು ಅಭ್ಯಾಸ ಮಾಡುವವರಿಗೆ ಸಾಧ್ಯವಿದ್ದ ನೆರವು ಕೊಡಲ್ಪಡುತ್ತಿದೆ.

## ರೀಡರ ಮತ್ತು ರಿಸರ್ಚ ಅಸಿಸ್ಟಂಟರ ಕಾರ್ಯಕಲಾಪ

ಸಮಾಜಶಾಸ್ತ್ರ, ದ್ರಾವಿಡಭಾಷಾಶಾಸ್ತ್ರ ಮತ್ತು ಕನ್ನಡ ಭಾಷೆ ಮತ್ತು ಸಾಹಿತ್ಯ ಈ ವಿಷಯಗಳಲ್ಲಿ ಆ ಆ ಶಾಖೆಯ ರೀಡರರು ಕೆಲಸ ಮಾಡುತ್ತಿದ್ದಾರೆ. ಭಟಕಳ ಪೇಠಾ ಮತ್ತು ಅದರ ನೆರೆಹೊರೆಯ ಭಾಗದಲ್ಲಿ ವಾಸಮಾಡಿದ ನವಾಯತ ಸಮಾಜದ ಶಾಸ್ತ್ರೀಯ ಅಭ್ಯಾಸವನ್ನು ಸಮಾಜಶಾಸ್ತ್ರದ ರೀಡರರು ಮಾಡಿ ಮುಗಿಸಿದ್ದಾರೆ. ಅದೇ ಪ್ರಕಾರ ಅವರು ಪಶ್ಚಿಮ ಸಮುದ್ರ ತೀರದಗುಂಟ ನೆಲಸಿದ ಕೊಂಕಣ ಮುಸಲ್ಮಾನರ ಮತ್ತು ಮಲಬಾರದ ಮಾಪಿಳ್ಳೆಯವರ ಬಗ್ಗೆಯೂ ಸಂಶೋಧನೆ ನಡೆಸಿದ್ದಾರೆ.

ದ್ರಾವಿಡ ಭಾಷಾಶಾಸ್ತ್ರದ ರೀಡರರು ವಡ್ಡಾರಾಧನೆ,ರನ್ನನ ಗದಾಯುದ್ಧಗಳ ಭಾಷಾಭ್ಯಾಸವನ್ನು ಆರಂಭಿಸಿರುವರು. ಮಡಿಕೇರಿ ಭಾಗದಲ್ಲಿದ್ದ ಕೊಡಗು ಭಾಷೆಯ

# ಪುಸ್ತಕ ಭಾಂಡಾರ

## (Research Library)

ಸಂಸ್ಥೆಯು ತನಗೆ ಸಾಧ್ಯವಾದಷ್ಟು ಅಚ್ಚಾದ ಸಂಶೋಧನ ಪುಸ್ತಕಗಳ ಭಾಂಡಾರವನ್ನು ಕಟ್ಟಿಕೊಂಡಿದೆ. ಈಗಾಗಲೇ ೫೦೦೦ ಕ್ಕೂ ಮೇಲ್ಪಟ್ಟ ಪುಸ್ತಕಗಳ ಸಂಗ್ರಹವಾಗಿದೆ. ಸಂಶೋಧನೆಗೆ ಸಂಬಂಧಿಸಿದ ೩೦ ನಿಯತ ಕಾಲಿಕಗಳು ಬರುತ್ತಿವೆ. ಇತಿಹಾಸ, ಕಲೆ, ಪುರಾಣವಸ್ತು ಸಂಶೋಧನೆ, ವಾಸ್ತುಶಿಲ್ಪ, ಮೂರ್ತಿ-ಶಿಲ್ಪ, ನಾಣ್ಯಶಾಸ್ತ್ರ, ಜನಾಂಗಶಾಸ್ತ್ರ, ಸಮಾಜಶಾಸ್ತ್ರ, ದ್ರಾವಿಡ ಭಾಷಾಶಾಸ್ತ್ರ, ಸಂಸ್ಕೃತ ಸಾಹಿತ್ಯ, ಕನ್ನಡಸಾಹಿತ್ಯವೊದಲಾದ ವಿಷಯಗಳ ಮೇಲೆ ಈ ಗ್ರಂಥಗಳಿವೆ.


ದ್ರಾವಿಡ ಭಾಷಾಶಾಸ್ತ್ರ ಮತ್ತು ಸಮಾಜಶಾಸ್ತ್ರ ಎಂಬ ಎರಡು ಹೊಸ ವಿಷಯಗಳನ್ನು ಕಲಿಸುವ ಮತ್ತು ಸಂಶೋಧಿಸುವ ಏರ್ಪಾಡು ೧೯೪೯ರಲ್ಲಿ ಆದುದ-ರಿಂದ ಈ ವಿಷಯುಗಳಿಗೆ ಸಂಬಂಧಿಸಿದ ಗ್ರಂಥಗಳು ಸಾಕಷ್ಟು ಇರುವದಿಲ್ಲ. ಭಾಂಡಾರವು ಇನ್ನೂ ಅನೇಕ ಪುಸ್ತಕಗಳನ್ನು ಕೊಳ್ಳಬೇಕಾಗಿದೆ. ಹಣದ ಅನುಕೂಲತೆಯಾದಾಗ ಅವುಗಳನ್ನು ಕೊಳ್ಳುತ್ತ ಹೋಗುವದು. ಮುಂಬಯಿ ಕರ್ನಾಟಕದಲ್ಲಿ ಈ ರೀತಿಯ ಸಂಶೋಧನ ಸಂಸ್ಥೆ ಇದೊಂದೇ ಆದುದರಿಂದ ಅದರ ಗ್ರಂಥಾಲಯವನ್ನು ಹೆಚ್ಚು ಪರಿಪೂರ್ಣ ಮಾಡುವದು ಅವಶ್ಯವಿದೆ.


ಭಾಂಡಾರದಲ್ಲಿಯೆ ಕುಳಿತು ಅಭ್ಯಾಸ ಮಾಡುವವರಿಗೆ ಸಾಧ್ಯವಿದ್ದ ನೆರವು ಕೊಡಲ್ಪಡುತ್ತಿದೆ.

## ರೀಡರ ಮತ್ತು ರಿಸರ್ಚ ಅಸಿಸ್ಟಂಟರ ಕಾರ್ಯಕಲಾಪ

ಸಮಾಜಶಾಸ್ತ್ರ, ದ್ರಾವಿಡಭಾಷಾಶಾಸ್ತ್ರ ಮತ್ತು ಕನ್ನಡ ಭಾಷೆ ಮತ್ತು ಸಾಹಿತ್ಯ ಈ ವಿಷಯುಗಳಲ್ಲಿ ಆ ಆ ಶಾಖೆಯ ರೀಡರರು ಕೆಲಸ ಮಾಡುತ್ತಿದ್ದಾರೆ. ಭಟಕಳ ಪೇಠಾ ಮತ್ತು ಅದರ ನೆರೆಹೊರೆಯ ಭಾಗದಲ್ಲಿ ವಾಸಮಾಡಿದ ನವಾಯತ ಸಮಾಜದ ಶಾಸ್ತ್ರೀಯ ಅಭ್ಯಾಸವನ್ನು ಸಮಾಜಶಾಸ್ತ್ರದ ರೀಡರರು ಮಾಡಿ ಮುಗಿಸಿ ದ್ದಾರೆ. ಅದೇ ಪ್ರಕಾರ ಅವರು ಪಶ್ಚಿಮ ಸಮುದ್ರ ತೀರದಗುಂಟ ನೆಲಸಿದ ಕೊಂಕಣ ಮುಸಲ್ಮಾನರ ಮತ್ತು ಮಲಬಾರದ ಮಾಪಿಳ್ಳೆಯವರ ಬಗ್ಗೆಯೂ ಸಂಶೋಧನೆ ನಡೆಸಿದ್ದಾರೆ.

ದ್ರಾವಿಡ ಭಾಷಾಶಾಸ್ತ್ರದ ರೀಡರರು ವಡ್ಡಾರಾಧನೆ, ರನ್ನನ ಗದಾಯುದ್ಧಗಳ ಭಾಷಾಭ್ಯಾಸವನ್ನು ಆರಂಭಿಸಿರುವರು. ಮಡಿಕೇರಿ ಭಾಗದಲ್ಲಿದ್ದ ಕೊಡಗು ಭಾಷೆಯ





ಧಾರವಾಡ, ಕನ್ನಡ ರಿಸರ್ಚ ಇನ್ಸ್ಟಿಟ್ಯೂಟ :— ಶಬ್ದಮಣಿದರ್ಪಣದ ತಾಳೇಗರಿ ಹಸ್ತಪ್ರತಿಯ ( ವ್ಯಾ. ನಂ. ೪೪) ಮೇಲೆ ಕೊರೆದ ಚಿತ್ರವಿಚಿತ್ರ ಸುಂದರ ರೇಖಾ ಚಿತ್ರಗಳು. (ಪುಟ ೧೭)

ಮತ್ತು ಲಕ್ಷ್ಮೇಶ್ವರದ ನೇಕಾರ ಮೊದಲಾದ ಸಮಾಜದವರ ಮಾತುಗಳ ಅಭ್ಯಾಸ-ವನ್ನೂ ಕೈಕೊಂಡಿರುವರು. ಕನ್ನಡದಲ್ಲಿ ಸಂಸ್ಕೃತದಿಂದ ಎರವಲಾಗಿ ತೆಗೆದುಕೊಂಡ ಶಬ್ದಗಳ ಬಗ್ಗೆಯೂ ಸಂಶೋಧನೆ ನಡೆಸಿರುವರು. ಅಲ್ಲದೆ ಅವರು ತಮ್ಮ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಗೆ ಸಂಬಂಧಿಸಿದ ಕೆಲವು ವಿಷಯಗಳನ್ನು ಕೊಟ್ಟು ಮಾರ್ಗದರ್ಶನ ಮಾಡುತ್ತಿದ್ದಾರೆ. ಮತ್ತು ಸಂಶೋಧನ ನಿಯತಕಾಲಿಕಗಳಲ್ಲಿ ಕೆಲವು ಸಂಕ್ಷಿಪ್ತ ಟಿಪ್ಪಣಿಗಳನ್ನು ಬರೆದು ಪ್ರಸಿದ್ಧಿಸಿದ್ದಾರೆ.

ಕನ್ನಡ ಭಾಷಾ ಮತ್ತು ಸಾಹಿತ್ಯದ ರೀಡರರು ಬ್ರಹ್ಮಶಿವನ ‘ ಸಮಯ ಪರೀಕ್ಷೆ ’ ಎಂಬ ಗ್ರಂಥವನ್ನು ಸಂಪಾದಿಸಿ ಪ್ರಕಟಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಮತ್ತು “ ಕನ್ನಡದಲ್ಲಿ ಜೈನ ಭಾರತಗಳು ” ಎಂಬ ವಿಷಯದ ಮೇಲೆಯೂ ಅಭ್ಯಾಸ ನಡೆಸಿದ್ದಾರೆ. ತಮ್ಮ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ವಿದ್ಯಾರ್ಥಿಗಳಿಗೂ ಅವರ ಅಭ್ಯಾಸದಲ್ಲಿ ಬೇಕಾದ ನೆರವು ಕೊಡುತ್ತಲಿದ್ದಾರೆ.

ರಿಸರ್ಚ ಅಸಿಸ್ಟಂಟರು ಪ್ರತಿವರ್ಷ ಗ್ರಾಮಾಂತರಗಳಲ್ಲಿ ಸಂಚರಿಸಿ ಹೊಸ ಶಾಸನ, ಹಸ್ತಲಿಖಿತ ಗ್ರಂಥ, ನಾಣ್ಯ ಮುಂತಾದವುಗಳನ್ನು ದೊರಕಿಸಿ ಅವುಗಳನ್ನು ಸಂಸ್ಥೆಯಲ್ಲಿ ಅಭ್ಯಾಸಮಾಡುವರು. ಅವರು ಡಾಯರೆಕ್ಟರರ ನೇತೃತ್ವದಲ್ಲಿ ವಸ್ತುಸಂಗ್ರಹಾಲಯದ ಕೆಲಸವನ್ನು ನೋಡುವರು. ಗ್ರಂಥಪ್ರಕಾಶನ ಮತ್ತು ಶಾಸ್ತ್ರೀಯ ವಿಷಯಗಳಿಗೆ ಸಂಬಂಧಿಸಿದ ಕಾರ್ಯಗಳಲ್ಲಿ ಸಂಸ್ಥೆಯ ಡಾಯರೆಕ್ಟರರಿಗೆ ನೆರವಾಗುವರು. ಅವರು ‘ ಅಬಲೂರ ಚರಿತೆ ’ ಎಂಬ ಸಾಂಗತ್ಯ ಗ್ರಂಥವನ್ನು ಪ್ರಕಟನೆಗಾಗಿ ಸಂಪಾದಿಸುತ್ತಿದ್ದಾರೆ.

## ಸ್ನಾತಕೋತ್ತರ ಅಭ್ಯಾಸ ಮತ್ತು ಸಂಶೋಧನೆ
### ( ಪಿಎಚ್. ಡಿ. ಡಿಗ್ರಿಗೆ )

ಮೂಲಸಂಶೋಧನ ಸಾಮಗ್ರಿಗಳನ್ನು ಶಾಸ್ತ್ರೀಯ ರೀತಿಯಲ್ಲಿ ಹೇಗೆ ಅಳವಡಿಸಿಕೊಳ್ಳಬೇಕು, ಅಭ್ಯಾಸಮಾಡಬೇಕು ಎಂಬುದನ್ನು ರಿಸರ್ಚಫೆಲೋ ಮತ್ತು ರಿಸರ್ಚ ಸ್ಟೂಡಂಟರಿಗೆ ಸಂಸ್ಥೆಯು ಕಲಿಸುತ್ತಿದೆ. ಭಾರತದ ಪ್ರಾಚೀನ ಇತಿಹಾಸ ಮತ್ತು ಕನ್ನಡ ಈ ವಿಷಯಗಳನ್ನು ಕಲಿಯಲು ಮತ್ತು ಅವುಗಳಲ್ಲಿ ಸಂಶೋಧನೆ ಮಾಡಲು ಅನುಕೂಲತೆಯಿದೆ. ಸಂಸ್ಥೆಯ ಡಾಯರೆಕ್ಟರರಾದ ವಿದ್ಯಾರತ್ನ ಆರ್. ಎಸ್. ಪಂಚಮುಖಿ ಎಂ. ಎ. ಅವರನ್ನು ಮುಂಬಯಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ಮೇಲಿನ ವಿಷಯಗಳನ್ನು ಕಲಿಸಲು ಅರ್ಹರೆಂದು ಗಣಿಸಿದ್ದಾರೆ. ಈಗಾಗಲೇ ಶ್ರೀ ಎ. ಟಿ. ಪಾಟೀಲ, ಎಂ. ಎ. ಮತ್ತು ಶ್ರೀ. ವ್ಹಿ. ಆರ್. ಉಮರ್ಜಿ ಎಂ. ಎ. ಬಿ. ಟಿ. ಅವರು ಶ್ರೀ ಪಂಚಮುಖಿಯವರ ಮಾರ್ಗದರ್ಶನದಲ್ಲಿ ಅನುಕ್ರಮವಾಗಿ “ ಪ್ರಸನ್ನ ವೆಂಕಟದಾಸರು ” ಮತ್ತು “ ಕನ್ನಡವ್ಯಾಕರಣದ ಮೇಲೆ ಸಂಸ್ಕೃತ

ಮತ್ತು ಪ್ರಾಕೃತಗಳ ಪ್ರಭಾವ ” ಎಂಬ ವಿಷಯಗಳನ್ನು ಅಭ್ಯಾಸಮಾಡಿ ಪಿಎಚ್. ಡಿ. ಪದವಿಯನ್ನು ಪಡೆದಿದ್ದಾರೆ. ಸಂಸ್ಥೆಯಲ್ಲಿ ರಿಸರ್ಚ ಫೆಲೋ ಆಗಿದ್ದ ಶ್ರೀ. ಡಿ. ಎಚ್. ಕೊಪ್ಪರ, ಎಂ. ಎ. ಅವರು ಡಾಯರೆಕ್ಟರರ ನೇತೃತ್ವದಲ್ಲಿ “ಹೊಯ್ಸಳರ ಕಾಲದಲ್ಲಿಯ ಸಾಮಾಜಿಕ ಜೀವನ ಮತ್ತು ರಾಜ್ಯಭಾರದ ಪದ್ಧತಿಗಳು” ಎಂಬ ವಿಷಯುವನ್ನು ಅಭ್ಯಾಸಮಾಡಿ ಮುಗಿಸಿದ್ದಾರೆ. ತೀವ್ರದಲ್ಲಿಯೇ ಅವರು ಅದನ್ನು ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ.ಡಿಗ್ರಿ ಪರೀಕ್ಷೆಗೆ ಕಳಿಸುವವರಿದ್ದಾರೆ.

ಪ್ರೊ. ಎಚ್. ಟಿ. ಸಾಸನೂರ ಎಂ. ಎ. ಶ್ರೀ ಎಸ್. ಜಿ. ಕಾಡದೇವರಮಠ ಬಿ.ಎ. ಮತ್ತು ಶ್ರೀ ವೇದವ್ಯಾಸಾಚಾರ ಕೃಷ್ಣಾಚಾರ ಹೂಲಿ ಎಂ.ಎ. ಇವರು ಈಗಾಗಲೆ ತಮ್ಮ ಪ್ರಬಂಧಗಳನ್ನು ತಯಾರಿಸಿದ್ದಾರೆ. ಅವರ ಪ್ರಬಂಧಗಳು ಅನುಕ್ರಮವಾಗಿ “೧೧-೧೨ ನೆಯ ಶತಮಾನದ ಕನ್ನಡ ಸಾಹಿತ್ಯ,” “ಕೆಳದಿ ಅರಸರ ಕಾಲದ ಕನ್ನಡ ಸಾಹಿತ್ಯ” ಮತ್ತು “ಕರ್ನಾಟಕದ ಹರಿದಾಸರ ವಿಮರ್ಶಾತ್ಮಕ ಅಭ್ಯಾಸ” ಎಂದಿವೆ. ಶ್ರೀ. ಎಸ್. ಎಚ್. ರಿತ್ತಿ ಎಂ. ಎ., ಶ್ರೀ ಎಸ್.ಆರ್. ತಟ್ಟಿ ಬಿ.ಎ.ಬಿ.ಟಿ, ಪ್ರೊ. ಕೆ. ಎಂ. ಕೃಷ್ಣರಾವ ಎಂ. ಎ. ಮುಂತಾದವರೂ ಬೇರೆ ಬೇರೆ ವಿಷಯಗಳ ಮೇಲೆ ಡಾಯರೆಕ್ಟರರ ನೇತೃತ್ವದಲ್ಲಿ ಡಾಕ್ಟರೇಟ್ ಪದವಿಗಾಗಿ ಪ್ರಬಂಧಗಳನ್ನು ಬರೆಯುತ್ತಿದ್ದಾರೆ.

## ಸಂಸ್ಥೆಯ ಸಂಶೋಧನ ಮಂಡಲ

ಸಂಸ್ಥೆಯವರೇ Research Seminar ಎಂಬ ಒಂದು ಸಂಶೋಧನ ಮಂಡಲವನ್ನು ಮಾಡಿಕೊಂಡಿರುವರು. ಅವರು ಮೇಲಿಂದ ಮೇಲೆ ಕೂಡಿ ಕೆಲವು ವಿಶಿಷ್ಟ ವಿಷಯಗಳ ಮೇಲೆ ಪ್ರಬಂಧಗಳನ್ನು ತಯಾರಿಸಿ ಮಾತನಾಡುವರು ಮತ್ತು ಚರ್ಚಿಸುವರು.

## ಸಂಸ್ಥೆಯ ಪ್ರಕಟನೆಗಳು

ಸಂಸ್ಥೆಯು ತನ್ನ ೧೩ ವರುಷದ ಕಾಲಾವಧಿಯಲ್ಲಿ ‘ಕರ್ನಾಟಕ ಶಾಸನಗಳು’ ಎಂಬ ಎರಡು ಸಂಪುಟಗಳನ್ನು, ೧೯೪೧ರಿಂದ ೪೭ರ ವರೆಗಿನ ವಾರ್ಷಿಕ ವರದಿಗಳನ್ನು, ಆರು ವ್ಯಾಖ್ಯಾತರ ಸಂಶೋಧನ ಭಾಷಣಗಳನ್ನು, ಕನ್ನಡ-ಸಂಸ್ಕೃತ ಸಾಹಿತ್ಯ, ಭಾಷೆ, ಕಲೆ, ಇತಿಹಾಸ, ಕಾಮಶಾಸ್ತ್ರ ಮುಂತಾದ ವಿಷಯಗಳಿಗೆ ಸಂಬಂಧಿಸಿದ ೭ ಗ್ರಂಥಗಳನ್ನು ಪ್ರಕಟಿಸಿದೆ. ಇನ್ನೂ ಕೆಲವು ಗ್ರಂಥಗಳು ಅಚ್ಚಿನಲ್ಲಿವೆ. ಅವು ತೀವ್ರ ಹೊರಬೀಳಬಹುದು.



ಧಾರವಾಡ, ಕನ್ನಡ ಸಂಶೋಧನ ಸಂಸ್ಥೆ – ದಂಪತಿಗಳ ನಕ್ಷೆಯುಳ್ಳ ಅಡಕೋತು.
( ತೆರೆದ ಸ್ಥಿತಿಯಲ್ಲಿ ) (ಪುಟ ೧೫)

# ಪ್ರಕಟವಾದ ಗ್ರಂಥಗಳು

## ಶಾಸನ ಸಂಪುಟಗಳು

(೧) Karnatak Inscriptions Vol. 1
(೨) Karnatak Inscriptions Vol. 2

## ವಾರ್ಷಿಕ ವರದಿಗಳು

(೩) Annual Report on Kannada Research in Bombay Province 1939–40.
(೪) Digest of Annual Report on Kannada Research in Bombay Province 1941–42.
(೫) Progress of Kannada Research in Bombay Province 1941–46.

## ವಾಙ್ಮಯ ಮತ್ತು ಇತರ ಗ್ರಂಥಗಳು

| | ಗ್ರಂಥ | ಕರ್ತೃ | |
|---|---|---|---|
| (೬) | ಐರಾವತ | ಕುಮಾರವ್ಯಾಸ | |
| (೭) | ಕವಿಜಿಹ್ವಾಬಂಧನಂ | ಈಶ್ವರಕವಿ | |
| (೮) | ಮದನತಿಲಕಂ (ಕಾಮಶಾಸ್ತ್ರ) | ಚಂದ್ರರಾಜ | (ಅಚ್ಚಿನಲ್ಲಿದೆ) |
| (೯) | ವಿರೂಪಾಕ್ಷವಸಂತೋತ್ಸವಚಂಪೂ (ಸಂಸ್ಕೃತ) | ಅಹೋಬಲ | ,, |
| (೧೦) | ಮಾಧವಾಲಂಕಾರ | ಮಾಧವಕವಿ | ,, |

(೧೧) Synchronistic Chronological Tables of Arabic, Hijari, Fasli, Saka and Christian ( A. D.) years ,,
(೧೨) Gandharvas & Kinnaras in Indian Iconography. —*R. S. Panchamukhi.*
(೧೩) Twelve years of Kannada Research in Bombay Province) 1939–51. —*R. S. Panchamukhi.*
(೧೪) Descriptive Catalogue of Manuscripts Vo. 1.
(ಸಂಸ್ಥೆಯ ಹಸ್ತಲಿಖಿತ ಗ್ರಂಥಗಳ ವಿವರಣ ಪಟ್ಟಿಕೆ ಸಂಪುಟ ೧)

## ಸಂಶೋಧನ ಭಾಷಣಗಳು

| ವಿಷಯು | ಉಪನ್ಯಾಸಕರು. |
|---|---|
| (೧೫) Three lectures | *K. V. Subrahmanya Aiyar.* |
| (೧೬) ಮೂರು ಉಪನ್ಯಾಸಗಳು | ಗೋವಿಂದ ಪೈ. |
| (೧೭) ಶಬ್ದಮಣಿ ದರ್ಪಣದ ಪಾಠಾಂತರಗಳು ಮತ್ತು ಅನುಭವಾಮೃತಸಾರವೂ ಹರಿಕಥಾಮೃತಸಾರವೂ | ಪ್ರೊ. ಡಿ.ಕೆ. ಭೀಮಸೇನ ರಾವ್ |
| (೧೮) ಕರ್ನಾಟಕ ಸಂಗೀತವೂ ದಾಸಕೂಟವೂ ಅರ್ಥಾತ್ ಭಾರತೀಯ ಆರ್ಯ ಸಂಗೀತದ ಇತಿಹಾಸವು. | ವೈ. ಕಿನ್ನರಿ ವಿದ್ವಾನ್ ಹುಲಗೂರು ಕೃಷ್ಣಾಚಾರ್ಯ |
| (೧೯) ಕರ್ನಾಟಕದ ಪೂರ್ವ ಚರಿತ್ರೆ:— | ದಿ. ಎಂ. ಎಚ್. ಕೃಷ್ಣ. |
| (೨೦) ಕೆಲವು ಕನ್ನಡ ವ್ಯಾಕರಣ ವಿಚಾರಗಳು:— | ಪಂಡಿತ ಮ. ಪ್ರ. ಪೂಜಾರ. |

## ಕನ್ನಡ ಸಂಶೋಧನೆಗೆ ಸಂಸ್ಥೆಯ ಕೊಡುಗೆ

ತಾನು ಹುಟ್ಟಿದ ೭ ವರ್ಷಗಳ ಕಾಲದಲ್ಲಿ ಸಂಸ್ಥೆಯು ಏನೇನು ಸಾಧಿಸಿದೆ ಎಂಬುದನ್ನು ವಿವರವಾಗಿ 'Progress of Kannada Research in Bombaby Province (1941-46)' (ಪುಟ ೩೫) ಎಂಬ ಪುಸ್ತಕದಲ್ಲಿ ಕಾಣಿಸಿದೆ. ಮುಂದೆ ಆದ ಸಂಶೋಧನೆಗಳು ಅನಂತರದ ವಾರ್ಷಿಕ ವರದಿಗಳಲ್ಲಿ ವಿವರಿಸಲ್ಪಟ್ಟಿವೆ.

ಸಂಸ್ಥೆಯು ನಡೆಸಿದ ಸಂಶೋಧನೆಯ ಮಹತ್ವವನ್ನು ಕೆಳಗಿನಂತೆ ಸ್ಥೂಲವಾಗಿ ವಿವರಿಸಬಹುದು.

(೧) ಕರ್ನಾಟಕದ ಇತಿಹಾಸ, ಜನತೆ, ಭಾಷೆ, ಸಾಹಿತ್ಯ ಇವುಗಳಿಗೆ ಸಂಬಂಧಿಸಿದ ಮಹತ್ವದ ಮೂಲಸಾಮಗ್ರಿಗಳನ್ನು ಸಂಸ್ಥೆಯು ಪ್ರತಿವರ್ಷ ಸಂಗ್ರಹಿಸುತ್ತಲಿದೆ. ಈ ಸಂಗ್ರಹವು ಸಂಶೋಧನಕಾರ್ಯಕ್ಕೆ ಮೂಲಾಧಾರವಾಗಿದೆ.

(೨) ಕರ್ನಾಟಕದ ಕಲೆಗಳ ಅಭ್ಯಾಸವನ್ನು ಸಂಸ್ಥೆಯು ಮಾಡುತ್ತ ನಡೆದಿದೆ. ವರ್ಣಚಿತ್ರ, ವಾಸ್ತುಶಿಲ್ಪ–ಮೂರ್ತಿಶಿಲ್ಪಗಳ ಫೋಟೋ ತೆಗೆದು ಅಥವಾ ಅವುಗಳ ರೇಖಾಚಿತ್ರಗಳನ್ನು ಮಾಡಿ ವಸ್ತುಸಂಗ್ರಹಾಲಯುಟ ಕಲಾವಿಭಾಗದಲ್ಲಿ ಪ್ರದರ್ಶಿಸುತ್ತಿದೆ.



ಸೋದೆ ( ಉತ್ತರ ಕನ್ನಡ ಜಿಲ್ಲೆ ) –ಕಿನ್ನರಿ ( ಕಟ್ಟಿಗೆಯ ಮೂರ್ತಿ ).
ಈಗ ಇದು ಕನ್ನಡ ರಿಸರ್ಚ ಇನ್ಸ್ಟಿಟ್ಯೂಟಿನಲ್ಲಿದೆ. (ಪುಟ ೧೫)

(೩) ಪ್ರಾಚೀನ ಶಿಲಾಯುಗದಿಂದ ಆರಂಭಮಾಡಿ ಪ್ರಾಚೀನ ಕಬ್ಬಿಣ-ಯುಗದ ಕಾಲದ ಮತ್ತು ಅನಂತರಕಾಲದ ಐತಿಹಾಸಿಕ ಅವಶೇಷ ಸ್ಥಾನಗಳು ಬಹಳ ಕಂಡು ಬಂದಿವೆ. ಅವುಗಳಿಂದ ಕರ್ನಾಟಕದ ಇತಿಹಾಸದ ಮೇಲೆ ಹೊಸಬೆಳಕು ಬೀಳುತ್ತಿದೆ. ಈ ಕಾರ್ಯದಿಂದ ಸಂಸ್ಥೆಯು ಭಾರತೀಯ ಪುರಾಣಾವಶೇಷಗಳ ಸಂಶೋಧಕ ಗೋಷ್ಠಿಯಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿದೆ.

(೪) ಶಾಸನಗಳಿಂದ ಕೆಲ ಹೊಸ ಕವಿಗಳ ಹೆಸರುಗಳು ಬೆಳಕಿಗೆ ಬಂದಿವೆ. ಚಂದ್ರಭಟ್ಟ (ಚಾ. ವಿ. ೫೦=ಕ್ರಿ.ಶ. ೧೧೨೬), ರುದ್ರಭಟ್ಟ (ಶಕೆ ೯೯೬), ಸರ್ವಜ್ಞ ಪಟ್ಟವರ್ಧನ ಪೂಲಿಯ ವಾಸುದೇವ (ಜಗದೇಕಮಲ್ಲ ವರ್ಷ ೧೦) ಮೊದಲಾದ-ವರೇ ಈ ಹೊಸ ಕವಿಗಳು.

(೫) ಸಂಸ್ಥೆಯು ಸಂಗ್ರಹಿಸಿದ ಹಸ್ತಲಿಖಿತ ಗ್ರಂಥಗಳು ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಅಭ್ಯಸಿಸಲು ಅನುಕೂಲವಾಗಿವೆ. ಮುಖ್ಯವಾದವುಗಳನ್ನು ಮಾತ್ರ ಸಂಸ್ಥೆಯು ಸಂಪಾದಿಸಿ ಪ್ರಕಟಿಸುತ್ತದೆ. ಎಲ್ಲ ಸಂಗ್ರಹದ ಸೂಚೀ ಗ್ರಂಥಗಳನ್ನು ತಯಾರಿಸುತ್ತದೆ.

(೬) ಮೂಲವಸ್ತುಗಳಿಂದಲೇ ಸಿದ್ಧವಾದ ಪ್ರಾಚ್ಯವಸ್ತುಸಂಗ್ರಹಾಲಯವು ಕನ್ನಡ ವಾಙ್ಮಯ, ಇತಿಹಾಸ, ಕಲೆ ಮುಂತಾದವುಗಳನ್ನು ಅಭ್ಯಾಸ ಮಾಡಲಿಕ್ಕೆ ಸ್ಫೂರ್ತಿಕೊಡುತ್ತದೆ.

(೭) ಜಾನಪದ ಗೀತೆಗಳನ್ನು ಅಭ್ಯಸಿಸುವ ಉಪಕ್ರಮವು ಮಹತ್ವದ್ದು. ಅದು ಕನ್ನಡಿಗರ ಆಶೆ–ಆಕಾಂಕ್ಷೆ, ಸ್ಫೂರ್ತಿ, ಸಂಸ್ಕೃತಿ ಇತ್ಯಾದಿಗಳನ್ನು ಪ್ರತಿಬಿಂಬಿಸುತ್ತದೆ.

(೮) ಅರ್ವಾಚೀನ ಕರ್ನಾಟಕದ ಇತಿಹಾಸವನ್ನು ತಿಳಿದುಕೊಳ್ಳಲು ಪರ್ಶಿಯನ್ ಮತ್ತು ಮೋಡಿ ಐತಿಹಾಸಿಕ ಕಾಗದಪತ್ರಗಳು ಅವಶ್ಯವಾಗಿವೆ. ವಿಜಯನಗರ ಕಾಲದ ತರುವಾಯದ ಇತಿಹಾಸ, ಸಂಸ್ಕೃತಿಗಳನ್ನು ಅಭ್ಯಸಿಸಲು ಇವು ಒಳ್ಳೆಯ ಉಪಯುಕ್ತವಿರುವವು. ಸಂಸ್ಥೆಯು ಈಗಾಗಲೇ ಈ ಐತಿಹಾಸಿಕ ಕಾಗದಪತ್ರಗಳ ಸಂಕಲನ ಮತ್ತು ಅಭ್ಯಾಸದ ಕಾರ್ಯಕ್ರಮವನ್ನು ಪ್ರಾರಂಭಿಸಿ ಮುಂದುವರಿಸಿದೆ.

(೯) ಮತ್ತು ಕೊನೆಯದಾಗಿ ಸಂಸ್ಥೆಯು ಸಂಶೋಧನೆಯನ್ನು ಮಾಡುವದರ ಜೊತೆಗೆ ಅಭ್ಯಾಸಿಗರಿಗೆ ತಕ್ಕ ಸಲಹೆಗಳನ್ನೂ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರಬಂಧಬರೆದು ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿಯನ್ನು ಪಡೆಯಲು ಅನುಕೂಲತೆಯನ್ನೂ ಕಲ್ಪಿಸಿಕೊಟ್ಟಿದೆ.

ಹೀಗೆ ಕೇವಲ ಚಿಕ್ಕದಾಗಿ ಪ್ರಾರಂಭವಾಗಿ ಕರ್ನಾಟಕದ ಇತಿಹಾಸ, ಸಂಸ್ಕೃತಿಯ ಅಭ್ಯಾಸದಲ್ಲಿ ಸಾಕಷ್ಟು ಸಂಶೋಧನೆಯನ್ನು ಮಾಡುತ್ತ ನಡೆದ ಈ

ಸಂಸ್ಥೆಯು ಈಗ ಕರ್ನಾಟಕಕ್ಕೆ ಸಂಬಂಧಿಸಿದ ಸಮಾಜಶಾಸ್ತ್ರ, ದ್ರಾವಿಡ ಭಾಷಾಶಾಸ್ತ್ರ, ಕನ್ನಡ ಸಾಹಿತ್ಯ, ಭಾಷೆ ಮುಂತಾದ ಬೇರೆ ಬೇರೆ ವಿಷಯಗಳ ಆಳವಾದ ಅಭ್ಯಾಸಕ್ಕೆ ಅವಕಾಶ ಕಲ್ಪಿಸಿಕೊಡುತ್ತಿರುವದು.

ಸಂಸ್ಥೆಯು ಪ್ರಕಟಿಸಿದ ಸಂಶೋಧನ ಗ್ರಂಥಗಳನ್ನು ಪರೀಕ್ಷಿಸಿ ಮತ್ತು ಅದು ನಡೆಸಿದ ಕೆಲಸವನ್ನು ಪ್ರತ್ಯಕ್ಷ ನೋಡಿ ತಜ್ಞ ಸಂಶೋಧಕರು ಮತ್ತು ಇತರ ವಿದ್ವಾಂಸರು ಮೆಚ್ಚಿ ಆನಂದಪಟ್ಟಿದ್ದಾರೆ. ಅವರಲ್ಲಿ ಕೆಲವರ ಅಭಿಪ್ರಾಯಗಳನ್ನು ಸಂಸ್ಥೆಯು ಪ್ರಸಿದ್ಧಿಸಿದ 'Twelve years of Kannada Research in Bombay Province (1939-51)' ಎಂಬ ಪುಸ್ತಕದಲ್ಲಿ ಕಾಣಬಹುದು.

## ಕೊನೆ

ಕನ್ನಡ ಸಂಸ್ಕೃತಿಯ ಅಭ್ಯಾಸವು ಪೂರ್ಣವಾಗಬೇಕಾದರೆ ಕನ್ನಡನಾಡಿನ ಎಲ್ಲ ಭಾಗಗಳಲ್ಲಿಯೂ ಇದ್ದ ಅವಶೇಷಗಳನ್ನು ಪರೀಕ್ಷಿಸುವದು ಅತ್ಯವಶ್ಯ. ಅವು ಪುರಾಣವಸ್ತುಗಳೇ ಇರಲಿ, ಕಲಾವಶೇಷಗಳೇ ಇರಲಿ, ಸಾಹಿತ್ಯಗ್ರಂಥಗಳೇ ಇರಲಿ ಅಥವಾ ರಾಜಕೀಯ ಮತ್ತು ಸಾಮಾಜಿಕ ಸಂಸ್ಥೆಗಳೇ ಇರಲಿ ಅಥವಾ ಭಾಷಾ ಸಾಮುಗ್ರಿಗಳೇ ಇರಲಿ ಅವುಗಳ ಅಭ್ಯಾಸವನ್ನು ಶಾಂತವಾಗಿ ಕೂಲಂಕಷವಾಗಿ ಪರಿಶೀಲಿಸುತ್ತ ಹೋದರೆ ಪ್ರಾಚೀನ ಕರ್ನಾಟಕದಲ್ಲಿ ಆಗಿಹೋದ ಆಂದೋಲನಗಳ ಸುಂದರ ಚಿತ್ರವು ಕಣ್ಣಮುಂದೆ ಬರುತ್ತದೆ. ಮತ್ತು ಹೀಗೆ ಮಾಡುವದರಿಂದ ಭಾರತವರ್ಷದ ನಾಗರಿಕತೆಗೆ ಕರ್ನಾಟಕದ ಕೊಡುಗೆ ಎಷ್ಟು ಮಹತ್ವದ್ದಿರುವದು ಎಂಬುದು ಗೊತ್ತಾಗುವದು. ಈ ರೀತಿಯಾಗಿ ಕನ್ನಡ ಸಂಶೋಧನ ಸಂಸ್ಥೆಯು ಸರ್ವಾಂಗಗಳಲ್ಲಿ ನಡೆಸುತ್ತಿದ್ದ ಸಂಶೋಧನ ಕಾರ್ಯವು ಪುರಾಣವಸ್ತು, ಸಾಹಿತ್ಯ ಮತ್ತು ಸಂಸ್ಕೃತಿ ಸಂಶೋಧಕರ ನಿರೀಕ್ಷೆಗಳನ್ನು ಪೂರೈಸುತ್ತಿದೆಯೆಂದು ಆಶಿಸಿದೆ.

| ಅನುಕ್ರಮ ನಂಬರ | ಊರು | ತಾಲೂಕು | ಜಿಲ್ಹೆ | ಪರಿಶೋಧಿಸಿದ ಕಾಲ | ದೊರೆತ ವಸ್ತುಗಳು |
|---|---|---|---|---|---|
| (೧) | ಹೆರಕಲ್ (ಘಟಪ್ರಭಾ ದಂಡೆಯ ಮೇಲೆ) | ಬಾಗಲಕೋಟೆ | ವಿಜಾಪೂರ | ೧೯೪೦ | ಬಣ್ಣದ ಚಿತ್ರದ ಹಂಚಿನ ಚೂರುಗಳು, ಶಂಖದ ಚೂರುಗಳು, ಆಭರಣದ ಮಣಿಗಳು ಇತ್ಯಾದಿ. ಕಬ್ಬಿಣಗಲ್ಲು, ಸುಟ್ಟ ಮಣ್ಣಿನ ಗೊಂಬೆಗಳು. |
| (೨) | ಅನಗವಾಡಿ | ಬೀಳಗಿ ಪೇಠಾ | ,, | ,, | ,, (ಇಲ್ಲಿ ಮೇಲಿನಂತಹ ಗೊಂಬೆಗಳು ಸಿಕ್ಕಿಲ್ಲ). |
| (೩) | ಸಿದ್ದಾಪೂರ (ಕೃಷ್ಣಾ ನದಿಯ ಹತ್ತರ) | ,, | ,, | ೧೯೪೧ | ಶಂಖದ ಆಭರಣಗಳು, ಬಣ್ಣದ ಹಂಚಿನ ಚೂರುಗಳು,ಆಕೃತಿಯುಳ್ಳ ಪಾತ್ರೆಯ ತುಂಡುಗಳು, ಮಣಿ ಇತ್ಯಾದಿ. |
| (೪) | ಹೆಗ್ಗೂರು | ,, | ,, | ,, | ಬಣ್ಣ ಬಳಿದ ಮಣ್ಣಿನ ಪಾತ್ರೆಗಳು. |
| (೫) | ಬೀರಖಬ್ಬಿ (ಕೃಷ್ಣಾ ನದಿಯ ಮೇಲೆ) | ,, | ,, | ,, | ಶಂಖದ ಆಭರಣಗಳು, ಮಣಿಗಳು ಇತ್ಯಾದಿ. |

| | | | | | |
|---|---|---|---|---|---|
| (೬) | ರೊಳ್ಳಿ | ,, | ,, | ,, | ಶಂಖದ ಚೂರುಗಳು, ಮಣಿಗಳು ಮತ್ತು ಉದ್ದ ಕುತ್ತಿಗೆಯ ಕೊಳವೆಯು. |
| (೭) | ಗಿರಿಸಾಗರ | ,, | ,, | ,, | ಗೆರೆಯುಳ್ಳ ಕಪ್ಪುಹಂಚಿನ ಚೂರುಗಳು. |
| (೮) | ಪಟ್ಟದಕಲ್ಲು | ಬದಾಮಿ | ,, | ,, | ಉರುಟಾದ ಮತ್ತು ಬಣ್ಣ ಬಳಿದ ದಪ್ಪ ಮತ್ತು ತೆಳ್ಳನ್ನ ಪಾತ್ರೆಯ ಚೂರುಗಳು ಇತ್ಯಾದಿ. |
| (೯) | ಸೊನ್ನ | ಬೀಳಗಿ ಪೇಠಾ | ,, | ,, | ಬಣ್ಣ ಹಚ್ಚಿದ ಮತ್ತು ನುಣು-ಪಾದ (polished) ಕಪ್ಪು, ಕೆಂಪು ಹಂಚಿನ ಚೂರುಗಳು, ಶಂಖದ ಚೂರುಗಳು. |
| (೧೦) | ಗರುಡದಿನ್ನಿ | ,, | ,, | ,, | ,, |
| (೧೧) | ಕಮುಡಾಳ | ಬಾಗೇವಾಡಿ | ,, | ,, | ಬಣ್ಣದ ಹಂಚಿನ ಚೂರುಗಳು. |
| (೧೨) | ಚಿಮ್ಮಲಿಗಿ | ,, | ,, | ,, | ಬಣ್ಣ ಹಚ್ಚಿದ ಮತ್ತು ನುಣುಪಾದ ಕಪ್ಪು, ಕೆಂಪು ಹಂಚಿನ ಚೂರುಗಳು, ಶಂಖದ ಆಭರಣಗಳು, ಮಣಿಗಳು ಇತ್ಯಾದಿ. |

| | | | | | |
|---|---|---|---|---|---|
| (೧೩) | ಹರ್ತಿ | ಗದಗ | ಧಾರವಾಡ | ,, | ಹರವಾದ ಬಾಯುಳ್ಳ ಮಣ್ಣಿನ ಸಣ್ಣ ಪಾತ್ರೆಗಳು. |
| (೧೪) | ವಡಗಾಂವ–ಮಾಧವಪೂರ | ,, | ಕುರುಂದವಾಡ ಸಂಸ್ಥಾನ | ,, | ಬ್ರಾಹ್ಮೀ ಅಕ್ಷರದಲ್ಲಿ ಬರೆದ ಯೂಪ ಸ್ತಂಭ (ಕ್ರಿ. ಶ. ಪೂ. ೧ನೆಯ ಶತಮಾನ), ಬಣ್ಣ ಹಚ್ಚಿದ ಮತ್ತು ನುಣುಪಾದ ಮಣ್ಣಿನ ಪಾತ್ರೆಗಳು, ಸುಟ್ಟ ಮಣ್ಣಿನ ಗೊಂಬೆಗಳು, ಕಬ್ಬಿಣದ ಆಯುಧಗಳು, ಬಣ್ಣ ಹಚ್ಚಿದ ಪಾತ್ರೆಗಳ ಮೇಲೆ ಕೆಲವು ಆಕೃತಿಗಳನ್ನು ರಚಿಸಿದೆ. ಇತ್ಯಾದಿ. |
| (೧೫) | ಬ್ರಹ್ಮಪುರಿ (ಭೀಮಾ ನದಿಯ ದಂಡೆಯ ಮೇಲೆ) | ಪಂಢರಪೂರ | ಸೊಲ್ಲಾಪೂರ | ೧೯೪೬ | ಬಣ್ಣ ಲೇಪಿಸಿದ ಮಣ್ಣಿನ ಪಾತ್ರೆಯ ಚೂರುಗಳು, ಶಂಖದ ಆಭರಣಗಳು, ಕಬ್ಬಿಣಗಲ್ಲು, ದೊಡ್ಡ ಕಲ್ಲಿನ ವರ್ತುಳಗಳು ಇತ್ಯಾದಿ. |
| (೧೬) | ಬ್ರಹ್ಮಪುರಿ (ಪಂಚಗಂಗಾ ನದಿಯ ಮೇಲೆ) | ಕೊಲ್ಹಾಪೂರ | ಕೊಲ್ಹಾಪೂರ | ,, | ಸುಟ್ಟ ಮಣ್ಣಿನ ಗೊಂಬೆಗಳು, ಬಣ್ಣ ಹಚ್ಚಿದ ಪಾತ್ರೆಗಳು ಇತ್ಯಾದಿ. ಇವು ಸಾತವಾಹನರ ಕಾಲದ ಅವಶೇಷಗಳು. |

| | | | | | |
|---|---|---|---|---|---|
| (೧೭) | ಇಟಗಿ (ತುಂಗಭದ್ರಾ ನದಿಯ ದಂಡೆಯ ಮೇಲೆ) | ಶಿರಹಟ್ಟಿ | ಸಾಂಗಲಿ ಸಂಸ್ಥಾನ | ,, | ಸುಟ್ಟ ಮಣ್ಣಿನ ಉಖಾಪಾತ್ರೆ (ಯಜ್ಞ ಕಾಲಕ್ಕೆ ಉಪಯೋಗಿಸತಕ್ಕದ್ದು) ಮತ್ತು ಬಣ್ಣಬಳಿದ ಮತ್ತು ನುಣುಪಾದ ಮಣ್ಣಿನ ಪಾತ್ರೆಗಳು. ನದಿಯ ಪಾತ್ರೆಯಲ್ಲಿ ಪೂರ್ವ ಶಿಲಾಯುಧಗಳೂ ದೊರೆತಿವೆ. |
| (೧೮) | ಹಳೇ ಘೋಗಾಂವ | ಮಿರಜಪ್ರಾಂತ | ಸಾಂಗಲಿ ಸಂಸ್ಥಾನ | ೧೯೪೪ | ಬಣ್ಣ ಹಚ್ಚಿದ ಕೆಂಪು, ಕಪ್ಪು ಹಂಚಿನ ಚೂರುಗಳು. |
| (೧೯) | ಮೋಜೆ ಡಿಗ್ರಜ | ,, | ,, | ,, | ಬಣ್ಣದ ಹಂಚಿನ ಚೂರುಗಳು. |
| (೨೦) | ಸಪ್ತಸಾಗರ | ಅಥಣಿ | ಬೆಳಗಾಂವ | ,, | ನೂತನ ಶಿಲಾಯುಧ, ಅಲ್ಪಾಯುಧಗಳು ( microliths ) ಮತ್ತು ಪುರಾತನ ಮಡಿಕೆಯ ಚೂರುಗಳು. |
| (೨೧) | ಹಾನಗಲ್ಲ | ಹಾನಗಲ್ಲ | ಧಾರವಾಡ | ೧೯೪೫ | ಬಿಳೀ ಬಣ್ಣದ ರೇಖೆಗಳುಳ್ಳ ಮಡಿಕೆಯ ಚೂರುಗಳು. |
| (೨೨) | ಕಡೋಲಿ | ಶಹಪೂರ | ಸಾಂಗಲಿ ಸಂಸ್ಥಾನ | ೧೯೪೬ | ನುಣುಪಾದ ಹಂಚಿನ ಚೂರುಗಳು. |
| (೨೩) | ಸಂಬರಗಿ | ,, | , | ,, | ಅಗಲ ಬಾಯಿಯ ಮಣ್ಣಿನ ಸಣ್ಣ ಪಾತ್ರೆಗಳು. |
| (೨೪) | ಹೊನ್ನಿನ ಮಾವನೂರ | ಹುಕ್ಕೇರಿ | ಬೆಳಗಾವ | ೧೯೪೬ | ಮಡಕೆಯ ತುಣುಕುಗಳು, ಬಣ್ಣದಿಂದ ಅಲಂಕರಿಸಿದ ಕಲ್ಲಿನ (cornelian) ಮಣಿ. |

| | | | | | |
|---|---|---|---|---|---|
| (೨೫) | ದಾನವಾಡ | – | ಕೊಲ್ಹಾಪುರ ಸಂಸ್ಥಾನ | ,, | ಹಂಚಿನ ಚೂರುಗಳು. |
| (೨೬) | ಘೋಸರವಾಡ | ,, | ಕೊಲ್ಹಾಪುರ ಸಂಸ್ಥಾನ | ೧೯೪೭ | ಮಡಿಕೆಯ ಚೂರುಗಳು ಮತ್ತು ಕಬ್ಬಿಣದ ಆಯುಧಗಳು. |
| (೨೭) | ನಾಗವಂದ | ಹಿರೇಕೆರೂರ | ಧಾರವಾಡ | ೧೯೪೮ | ನುಣುಪಾದ ಮಡಿಕೆಯ ಚೂರುಗಳು, ಸುಟ್ಟ ಮಣ್ಣಿನ ಮಣಿ, ನಕ್ಷೆಯ ಕೆಲಸವುಳ್ಳ ಮುಚ್ಚಳ, ಭಸ್ಮದ ಕಟ್ಟೆಗಳು. |
| (೨೮) | ಭೈರವನಪಾದ | ,, | ,, | ,, | ಕೆಂಪು ಬಣ್ಣದ ಮೇಲೆ ಎಳೆದ ಬಿಳೀ ಗೆರೆಗಳು, ಸುಟ್ಟ ಮಣ್ಣಿನ ಗೊಂಬೆ, ಭಸ್ಮದ ಕಟ್ಟೆಗಳು ಇತ್ಯಾದಿ. |
| (೨೯) | ರಾಮತೀರ್ಥ (ಕುಮದ್ವತೀ ನದಿಯ ದಂಡೆಯ ಮೇಲೆ) | ,, | ,, | ,, | ಕರಿಯ ಕಾಜಿನ ಬಳೆ ಚೂರು ಮತ್ತು ಅಗಸಾಲರ ಚೌಕು ಮುಸಿ. |
| (೩೦) | ಹಳ್ಳೂರು | ,, | ,, | ,, | ಮೇಲಿನಂತಹ ಬಣ್ಣದ ಮಡಿಕೆಯ ಚೂರುಗಳು. |
| (೩೧) | ಪುರದಗೇರಿ | ,, | ,, | ,, | ಹಳೆಯ ಪಾತ್ರೆಯ ಚೂರುಗಳು. ಚೋಳರಾಯನ ಅರಮನೆಯೆಂದು ಹೇಳುವ ಇಟ್ಟಂಗಿಗಳ ದಿಬ್ಬ. |

| | | | | | |
|---|---|---|---|---|---|
| (೩೨–೩೬) | ಖ್ಯಾಡ, ಮೆಣಸಗಿ, ಘಾಣಕ ಸಿರೂರ, ಮಣ್ಣೇರಿ ಸುತ್ತು ಮುತ್ತಿನ ಪ್ರದೇಶ. (ಬೆಣ್ಣೇ ಹಳ್ಳ, ಸಾಸಿವೀಹಳ್ಳ, ಹಿರೇ ಹಳ್ಳಗಳ ಕೊಳ್ಳ) | ಬಾದಾಮಿ ಮತ್ತು ರೋಣ | ವಿಜಾಪೂರ, ಧಾರವಾಡ | ೧೯೪೯ | ಪ್ರಾಚೀನ ಶಿಲಾಯುಧಗಳು. ( palaeoliths ) |
| (೩೭) | ಚಿನ್ನೀಕಟ್ಟೆ | ಹಿರೇಕೆರೂರ | ಧಾರವಾಡ | ,, | ಭಸ್ಮದ ಕಟ್ಟೆಗಳು (stone circles) |
| (೩೮–೩೯–೪೦) | ಸಿರಗಂಬಿ, ಹೊಸಳ್ಳಿ, ಗುಂಡಗಟ್ಟೆ | ,, | ,, | ೧೯೫೦ | ಬಣ್ಣದ ಪಾತ್ರೆಯ ಚೂರುಗಳು, ನೂತನ ಶಿಲಾಯುಧ, ಸುಟ್ಟ ಮಣ್ಣಿನ ಹೆಣ್ಣು ಗೊಂಬೆ, ಶಂಖದ ಚೂರುಗಳು ಇತ್ಯಾದಿ. ಗುಂಡಗಟ್ಟೆಯಲ್ಲಿ ಭಸ್ಮದ ಕಟ್ಟೆಗಳೂ ಸಹ ಇರುವವು. |
| (೪೧) | ಬನವಾಸಿ | ಸಿರಸಿ | ಉತ್ತರ ಕನ್ನಡ | ,, | ಕ್ರಿ. ಶ. ದ ಪ್ರಾರಂಭದ ಕಾಲದ ಸೀಸದ ನಾಣ್ಯಗಳು, ಹಳೆಯ ಮಡಕೆಯ ಚೂರುಗಳು ಇತ್ಯಾದಿ. |

G-2182
11-6-98

## ಕನ್ನಡ ಸಂಶೋಧನ ಸಂಸ್ಥೆಯ ಉಪದೇಶಕ ಸಮಿತಿ

೧. ಶ್ರೀ. ಶಿ. ಶಿ. ಹುಲಕೋಟಿ, ಬಿ. ಎ. ಎಲ್‌ಎಲ್. ಬಿ.,
ರಿಟಾಯರ್ಡ ಡಿಸ್ಟ್ರಿಕ್ಟ ಜಜ್ಜ, ವ್ಹಾಯಿಸ ಚಾನ್ಸೆಲರ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨. ಶ್ರೀ. ಎಸ್. ಎಮ್. ಕೈಕಿಣಿ, ಬಿ. ಎ. ಎಲ್‌ಎಲ್. ಬಿ.,
ರಿಟಾಯರ್ಡ ಡಿಸ್ಟ್ರಿಕ್ಟ ಜಜ್ಜ, ಧಾರವಾಡ.

೩. ಡಾ. ಎಸ್. ಸಿ. ನಂದೀಮಠ, ಎಮ್. ಎ., ಪಿಎಚ್. ಡಿ.,
ರಜಿಸ್ಟ್ರಾರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪. ಡಾ. ಕೆ. ಎಸ್. ಕಮಲಾಪುರ, ಎಮ್. ಬಿ. ಬಿ. ಎಸ್.,
ಧಾರವಾಡ.

೫. ಪ್ರೊ. ವಿ. ಸೀತಾರಾಮಯ್ಯ, ಎಮ್. ಎ., ಬೆಂಗಳೂರ.

೬. ಪ್ರೊ. ಎಸ್. ಎಸ್. ಮಾಳವಾಡ, ಎಮ್. ಎ.,
ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ಕಾಲೇಜ, ಧಾರವಾಡ

೭. ಪ್ರೊ. ಕೆ. ಜಿ. ಕುಂದಣಗಾರ, ಎಮ್. ಎ.,
ಕನ್ನಡ ಪ್ರಾಧ್ಯಾಪಕರು, ಆರ್. ಪಿ. ಡಿ. ಕಾಲೇಜ,
ಬೆಳಗಾಂವ.

೮. ಶ್ರೀ. ಆದ್ಯ ರಂಗಾಚಾರ್ಯ, ಎಮ್. ಎ. (ಲಂಡನ್),
ಧಾರವಾಡ.

೯. ವಿದ್ಯಾರತ್ನ ಆರ್. ಎಸ್. ಪಂಚಮುಖಿ, ಎಮ್. ಎ.,
ಡಾಯರೆಕ್ಟರ, ಕನ್ನಡ ರಿಸರ್ಚ ಇನ್ಸ್ಟಿಟ್ಯೂಟ,
ಧಾರವಾಡ.

Library IIAS, Shimla
K 891.481 407 P 191 K
G2182